
ಬಂದರೋ ಬಂದರು

ಬೀದಿನಾಟಕ



ವಿಜಯಾ





BANDARO BANDARU (Kannada) Street play by Smt. Vijaya
Published by Chitra Prakashana, Kalamandir, 5th Cross,
Hanumanthnagar, Bangalore-560 019 and Printed at Ila Printers
Chamarajpet, Bangalore-560 018

©	:	ಪ್ರಕಾಶಕರದು
ಮೊದಲ ಮುದ್ರಣ	:	ನವಂಬರ್ 1980
ಮುಖಪುಟ	:	ಎ. ಎಂ. ಪ್ರಕಾಶ್
ಬೆಲೆ	:	ರೂ. 5

ಈ ನಾಟಕ ಅಭಿನಯಿಸುವವರು ಪ್ರಕಾಶಕರ ವಿಳಾಸಕ್ಕೆ ಪೂರ್ವಭಾವಿಯಾಗಿ
15 ರೂ. ಗೌರವಧನ ಕಳುಹಿಸಿ ಲಿಖಿತ ಅನುಮತಿ ಪಡೆಯತಕ್ಕದ್ದು

ಚಿತ್ರಾ ಪ್ರಕಾಶನ

5 ನೇ ಕ್ರಾಸ್ ಕಲಾಮಂದಿರ ಹನುಮಂತನಗರ ಬೆಂಗಳೂರು-19



ಈ ಕೃತಿಯನ್ನು ನಾಟ್ಯೀಕರಿಸಿದ್ದು, ತುರ್ತುಪರಿಸ್ಥಿತಿಯ ದಿನಗಳಲ್ಲಿ. ಬೆನ್ನಟ್ಟಿದ ಪೋಲೀಸರನ್ನು ತಪ್ಪಿಸಿಕೊಳ್ಳುತ್ತ, ಸಿ.ಐ.ಡಿ.ಗಳನ್ನು ಒಳಗೊಳ್ಳುತ್ತ. ವಿಚಿತ್ರ ಅನುಭವಗಳನ್ನು ಕೊಡುತ್ತಲೇ ಬೆಳೆದುಬಂದ ಈ ಅಭಿವ್ಯಕ್ತಿ ಸ್ವರೂಪ-ಎಲ್ಲವೂ ನೆನಪಿನ ಖಜಾನೆಯಲ್ಲಿ ಕಹಿ-ಸಿಹಿಗಳ ದಾಖಲೆ.

ಆಡಿದವರು-ಆಡಿಸಿದವರು-ನೋಡಿದವರು
ಮೆಚ್ಚು-ಸಲಹೆ ಕೊಟ್ಟವರು ಎಲ್ಲರಿಗೂ
ನಾನು ಕೃತಜ್ಞೆ.

—ವಿಜಯಾ



'ಬಾಂದರೋ ಬಂದರು' ಚಿತ್ರಾ ಬೀದಿ ನಾಟಕದ ನೂರನೆಯ
ಪ್ರದರ್ಶನ ರಾಜಾಜಿನಗರದಲ್ಲಿ ನಡೆದಾಗ ಪ್ರೊ॥ ವಿ. ಕೃ. ಗೋಕಾಕ್

'ಬಂದರೋ ಬಂದರು' ಚಿತ್ರಾ ಪ್ರಕಾಶನದಿಂದ
ಹೊರಬರಲು ಸಮ್ಮತಿ ಇತ್ತ ಶ್ರೀಮತಿ ವಿಜಯಾ
ಅರ್ಥಪೂರ್ಣ ಹೊದಿಕೆ ಚಿತ್ರ ರಚಿಸಿದ ಎ. ಎಂ. ಪ್ರಕಾಶ್
ಅಚ್ಚುಕಟ್ಟಾಗಿ ಅಚ್ಚಿಸಿದ ಇಳಾ ಪ್ರಿಂಟರ್ಸ್‌ನ
ಪಡಿಯಚ್ಚುಗಳನ್ನು ಸಕಾಲದಲ್ಲಿ ಅಣಿ ಮಾಡಿಕೊಟ್ಟ ಡಂಕಣ
ಅವರಿಗೆ ವಂದನೆಗಳು

-ಪ್ರಕಾಶಕರು

ಬೀದಿನಾಟಕ : ನಾಲ್ಕುಮಾತು

'ಚಿತ್ರಾ' ಗೆಳೆಯರ ಗುಂಪು ಹೆಚ್ಚು ಹೆಚ್ಚು ಪ್ರೇಕ್ಷಕರನ್ನು ಒಳಗೊಳ್ಳುವ ಸಲುವಾಗಿ ಬೀದಿಗೆ ಬಂದದ್ದು 1974ರಲ್ಲಿ. ಅಂದಿನಿಂದ ಇಂದಿನವರೆಗೆ ಕರ್ನಾಟಕಾದ್ಯಂತ ನೂರಾರುಬಾರಿ ಅಭಿನಯಿಸಲ್ಪಟ್ಟಿರುವ ಶ್ರೀಮತಿ ವಿಜಯಾ ಅವರ 'ಬಂದರೋ ಬಂದರು' ಬೀದಿನಾಟಕಕ್ಕೆ ಬಹಳಷ್ಟು ಗುಂಪುಗಳಿಂದ ಬೇಡಿಕೆ ಬರುತ್ತಲೇ ಇದೆ.

'ನಮ್ಮೂರಿನ ಆಸಕ್ತರು ಬೀದಿನಾಟಕ ಆಡಬೇಕೆಂದಿದ್ದೇವೆ. ಆ ಬಗ್ಗೆ ಕೊಂಚ ವಿವರ ತಿಳಿಸಿ' ಎಂದು ಪತ್ರ ಬರೆದಿರುವವರಿಗೆ ಲೆಕ್ಕವಿಲ್ಲ. ಸಿದ್ಧರಂಗಮಂದಿರದಲ್ಲಿ ನಾಟಕ ಆಡುವುದಕ್ಕೂ–ಬೀದಿಯಲ್ಲಿ ನಾಟಕವಾಡುವುದಕ್ಕೂ ಬಹಳಷ್ಟು ವ್ಯತ್ಯಾಸ ಉಂಟು. ಸೆಟ್ಟು–ಸೀನರಿಗಳಿಲ್ಲದ, ರಂಗಪರಿಕರಗಳಿಲ್ಲದ, ವಿದ್ಯುದ್ದೀಪಗಳ ಗಿಮಿಕ್ಸ್ ಇಲ್ಲದ, ಮೈಕಿನ ಆರ್ಭಟವಿಲ್ಲದ ಬೀದಿನಾಟಕದಲ್ಲಿ ಕಲಾವಿದರ ಹೊಣೆ ದೊಡ್ಡದು. ಇದು ಮುಖ್ಯವಾಗಿ *Actors Theatre*. ಎಲ್ಲೋ ಹೊರಟು ನಿಂತ ಪ್ರೇಕ್ಷಕನನ್ನು ತಕ್ಷಣ ಆಕರ್ಷಿಸಿ–ಅವನ ಕುತೂಹಲ–ಆಸಕ್ತಿ ನಾಟಕ ಮುಗಿಯುವವರೆಗೆ ಉಳಿಸಿಕೊಳ್ಳುವ

ಸಂಪೂರ್ಣ ಜವಾಬ್ದಾರಿ ನಟನದೇ ಆಗುತ್ತದೆ. ಕಥೆಯ ಒಟ್ಟು ಪರಿಣಾಮಕ್ಕೆ ಧಕ್ಕೆ ಬಾರದಂತೆ ಹಾಡು, ಕುಣಿತ, ಹಾಸ್ಯ, ಗುಂಪುಗಳನ್ನು ಜಾಣತನದಿಂದ ಬಳಸಿಕೊಳ್ಳುವ ಹೊಣೆ ನಿರ್ದೇಶಕನದು. ನಾಟಕದ ವೇದಿಕೆಗೂ ಮತ್ತು ಪ್ರೇಕ್ಷಕಾಂಗಣಕ್ಕೂ ಮಧ್ಯೆ ಇರುವ ಭಾರಿ ಕಂದಕ ಬೀದಿ ನಾಟಕದಲ್ಲಿಲ್ಲ. ಪ್ರೇಕ್ಷಕ ಬೀದಿನಾಟಕದಲ್ಲಿ ನೇರವಾಗಿ ಪ್ರಶ್ನಿಸುತ್ತಾನೆ, ಉತ್ತರಿಸುತ್ತಾನೆ, ನಾಟಕಾನಂತರ ಗುಂಪಿನೊಂದಿಗೆ ಚರ್ಚಿಸುತ್ತಾನೆ. ಬೀದಿಯಂಚಿನಲ್ಲೀ ಚರ್ಚೆಗೂ ದಾರಿಮಾಡಿ ಬೀದಿನಾಟಕದ ಸ್ವರೂಪ ಮತ್ತಷ್ಟು ಗಟ್ಟಿಯಾಗಲು ನೆರವಾಗುತ್ತಾನೆ. ನಿಜವಾದ *intimate* ಥಿಯೇಟರ್ ಬೀದಿನಾಟಕವೇ.

ಬೀದಿನಾಟಕಕ್ಕೆ ಬಹಳ ಮುಖ್ಯವಾದದ್ದು ತಮಟೆ. ಕೇರಿಯ ಮಂದಿಗೆಲ್ಲ ನಾಟಕದ ಸುದ್ದಿ ಹಂಚುವ ತಮಟೆ ಕಾಲದಿಂದ ಒಂದು ರೀತಿಯಲ್ಲಿ ಪತ್ರಿಕೆಯ ಕೆಲಸವನ್ನೂ ಮಾಡುತ್ತ ಬಂದಿದೆ. ಆಟ್ಟಣೆಇಲ್ಲದೆ, ಪರದೆಗಳಿಲ್ಲದೆ ನಾಟಕ ಹೇಗೆ ಆಡುತ್ತಾರೆ ಎಂಬುದನ್ನು ಕಾಣಲು ಕುತೂಹಲದಿಂದಲೇ ಜನ ಬರುತ್ತಾರೆ. ನಾಟಕವಾಡುವ ಸ್ಥಳದಲ್ಲಿ ನೆಲದಮೇಲೆ ದೊಡ್ಡ ವೃತ್ತವೊಂದನ್ನು ಗುರುತಿಸಿ ಆಣಿಮಾಡಿದ್ದರೆ-ಬಂದ ಮಂದಿ ವೃತ್ತಾಕಾರದಲ್ಲಿ ಗೀರಿನಿಂದ ಆಚೆ ನಿಲ್ಲುತ್ತಾರೆ. ವೃತ್ತದ ಹೊರಗೆ ಜನ-ಒಳಗೆ ನಾಟಕ. ಜನದೊಂದಿಗೆ ಬೆರತ ನಟರು ಅವರ ಮಧ್ಯದಿಂದಲೇ ಆಗಮಿಸುತ್ತಾರೆ-ನಿರ್ಗಮಿಸುತ್ತಾರೆ. ಸಮಯ ಸಂದರ್ಭಾನುಸಾರ ಪ್ರೇಕ್ಷಕನೂ ಪ್ರಶ್ನಿಸಿ ಪಾತ್ರಧಾರಿಯಾದ ಉದಾಹರಣೆಗಳು ಹೇರಳ.

ಆರಂಭಕ್ಕೆ ತಮಟೆ ಬಾರಿಸುತ್ತ ನಟವೃಂದ ವೃತ್ತಾಕಾರ

ದಲ್ಲಿ ಸುತ್ತುತ್ತ, ಬೀದಿನಾಟಕದ ಆಶಯುಗಳನ್ನು ಕುರಿತ, ಬದುಕಿನ ಬವಣೆಗಳನ್ನು ಕುರಿತ ಗೀತೆಗಳನ್ನು ಹಾಡಿ ಮಾನಸಿಕವಾಗಿ ಪ್ರೇಕ್ಷಕರನ್ನು ಸಿದ್ಧಮಾಡಿ ನಂತರ ನಾಟಕ ಆರಂಭಿಸುವುದು ನಮ್ಮ ಪದ್ಧತಿ.

ರಂಗನಟ ಚಾಚೂತಪ್ಪದೆ ತಾನು ಬಾಯಿಪಾಠ ಮಾಡಿದ ಸಾಲುಗಳನ್ನು ಹೇಳಿ ಅಭಿನಯಿಸಿದರೆ ಸಾಕಾದೀತು. ಬೀದಿನಾಟಕದ ನಟ–ಪ್ರೇಕ್ಷಕರ ಪ್ರತಿಕ್ರಿಯೆ, ಪ್ರಶ್ನೆಗಳನ್ನು ಎದುರಿಸಿ–ಅದಕ್ಕೂ ಉತ್ತರಿಸುತ್ತ ಕಡಿದು ಹೋದ ತಂತುವನ್ನು ಮತ್ತೆ ನಾಟಕದ ವಿಷಯಕ್ಕೇ ಎಳೆದು ತಂದು ನಾಟಕ ಮುಂದುವರಿಸಬೇಕಾಗುತ್ತದೆ. ಆಲೋಚನೆಗೆ ಅವಕಾಶ ನೀಡುವ ಬೀದಿನಾಟಕ–ಜನರಲ್ಲಿ ಎಚ್ಚರ ಮೂಡಿಸಲು-ಹಾಗೂ ಅವರ ಅರಿವಿನ ಮಟ್ಟ ಹೆಚ್ಚಿಸಿ ಚಿಂತನೆಗೆ ದಾರಿಮಾಡುತ್ತದೆ. ಎಂಬುದು ಅನುಭವದ ನುಡಿ.

ಇಂಥ ಪಾತ್ರ ಎಂದು ಗುರುತಿಸಲು ಸಾಂಕೇತಿಕವಾದ ಉಡುಪು ಇದ್ದರಾಯಿತು. ಕುರ್ಚಿ, ಮೇಜು, ಸೋಫಾಗಳ, ಸೀನರಿಗಳ ಬಳಕೆಗೆ ಇಲ್ಲಿ ಅವಕಾಶ ಅಪರೂಪವಾದ್ದರಿಂದ ಕಲಾವಿದರ ಗುಂಪನ್ನೇ ಸೆಟ್ಟು, ಸೀನರಿಗಳಂತೆ ಬಳಸುವಲ್ಲಿ ನಿರ್ದೇಶಕ ಆಲೋಚಿಸಬೇಕಾಗುತ್ತದೆ. ಜಾನಪದ ಶೈಲಿಯ ಎಲ್ಲತಂತ್ರಗಳೂ ಇಲ್ಲಿ ಬಹಳಷ್ಟು ಉಪಯುಕ್ತವಾದಾವು.

ಬೀದಿನಾಟಕದ ಒಂದೊಂದು ಪ್ರಯೋಗವೂ ಒಂದೊಂದು ಪರೀಕ್ಷೆಯಿದ್ದಂತೆ. ಸಿದ್ಧರಂಗಮಂದಿರದಲ್ಲಿ ಒಂದು ನಾಟಕ ಮಾಡಿದಾಗ 500–600ಮಂದಿ ನೋಡ

ಬಹುದು. ಒಂದು ಬೀದಿನಾಟಕವಾಡುವುದೆಂದರೆ ನಾಲ್ಕು ರಿಪೀಟ್ ಷೋಗಳನ್ನು ಕೊಟ್ಟಂತೆ. –ಬೀದಿನಾಟಕದ ಗುಂಪುಗಳು ಹೆಚ್ಚಿ, ಜನಪರವಾದ ಅಂಶಗಳನ್ನು ಎತ್ತಿ ಹಿಡಿದಾಗ–ಇಂಥ ಪ್ರಯತ್ನಕ್ಕೆ ಹೆಚ್ಚು ಅರ್ಥ ಬಂದೀತು. ಬೀದಿಯಲ್ಲಿ ಆಡಿದ ನಾಟಕಗಳೆಲ್ಲ ಬೀದಿನಾಟಕಗಳಾಗು ವುದಿಲ್ಲ ಎಂಬ ಅಂಶ ಬೀದಿತಂಡಗಳಿಗೆ ತಿಳಿದಿರಬೇಕಾದದ್ದು ಅಗತ್ಯ.

'ಬಂದರೋ ಬಂದರು' ಈಗಾಗಲೇ 'ಚಿತ್ರಾ'ದವರಿಂದ ನೂರಾರುಬಾರಿ ರಂಗದಮೇಲೆ ಬಂದಿದೆ. ಇದನ್ನು ಆಡ ಬಯಸುವ ಇತರ ತಂಡಗಳ ಸಲುವಾಗಿ–ನಿರ್ದೇಶಕನಾಗಿ ನಮ್ಮ ತಂಡದ ರೀತಿಯನ್ನು ಇಲ್ಲಿ ಗುರುತಿಸಿರುವೆ.

ಬೇರೆ ತಂಡಗಳು ಇದೇ ಧಾಟಿ ಅನುಸರಿಸಬೇಕೆಂದಲ್ಲ. ಆದರೆ ನಾಟಕದ ಒಟ್ಟು ಪರಿಣಾಮ ಪ್ರಭಾವಪೂರ್ಣ ವಾಗುವಂತೆ–ನಿರ್ವಹಿಸುವುದು ಆ ತಂಡದ ನಿರ್ದೇಶಕನ ಹೊಣೆ.

ಎ. ಎಸ್. ಮೂರ್ತಿ

ಬಂದರೋ ಬಂದರು

ಬೀದಿ ನಾಟಕ ರಚನೆ: **ವಿಜಯಾ**

(ನಾಟಕದ ಪ್ರಕಟನೆ ಆದಕೂಡಲೆ ಇಬ್ಬರು ಹಾಡುತ್ತ
ಕುಣಿಯುವರು)
ಭಲೆ–ಭಲಿ–ಭಲಿ–ಭಲಿ–ಭಲಿ–ಭಲಿ–ಭಲಿ
ಕೇಳಿರಿ ನೀವ್ ಕೇಳಿರಿ2
ನೋಡಿರಿ ಆಟ ನೋಡಿರಿ ||ಓಹೊ||
ಮಾತನು ಕಿವಿಗೊಟ್ಕೇಳಿರಿ
ಆಟವ ಕಣ್ ಬಿಟ್ ನೋಡಿರಿ || ಅಹಾ ಕೇಳಿರಿ–ಕೇಳಿರಿ
–ಕೇಳಿರಿ

ಓ... ....
ನೋಡಿರಿ ಈಗ ಬರುವನು ಈಗ
ಸಿಮ್ಹ್ಮನು ಕಾಣಲು ಓಡೋಡಿ ಜೇಗ
ವಹು ವಹಂ–ಅಹ–ವಹು ವಹಂ
ವಿಚಿತ್ರನಗರದ ನಾಯಕಸಿಮ್ಹ
ಬರುವನು ಇಲ್ಲೀ–ಕಾಣಲು ಸಿಮ್ಹ್ಮನು
ಮಹಾಜ್ಞಾನಿ ಅಲ್ಲಲ್ಲ ಅಜ್ಞಾನಿ ||ಬಂದರೊ–ಓಹೋ
–ಬಂದರು||

ಇಲಿಯಿಂದ ಹುಲಿಯವರೆಗೆ
ಅಲ್ಲ ಅಲ್ಲ ಅಲ್ಲ ಅಲ್ಲ

ಹಳ್ಳಿಯಿಂದ ಡಿಲ್ಲಿಯವರೆಗೆ
ದೈವರಕ್ಷಿತ
ಅಲ್ಲ ಅಲ್ಲ ಅಲ್ಲ ಅಲ್ಲ
ದೈವರಕ್ಷಿತ
ಒಂದು ಕಾಲಿಕೆ ದರೋಡೆಕೋರ ||ಬಂದರೊ||

ಕಿಷ್ಕಿಂಧಾಪುರದ ಪರಮೇಶ್ವರಪ್ಪ
ಎಲ್ಲರ ಪ್ರಾಣ ಹಿಂಡುವನಪ್ಪ
ದೇವರು ೨ ೨ ೨ ೨ ಏಜೆಂಟರು
ಪಾದವನಿಲ್ಲಿಗೆ ಬೆಳೆಸಿಹರಪ್ಪ
ಕಾಣಿಕೆ ಹುಂಡಿಯ ತಂದಿಹರಪ್ಪ
ನಿಮ್ಮ ಹೊಸಿಲಿಗೇ ಬಂದಿಹರಪ್ಪ ||ಬಂದರೋ ಬಂದರು||
(ಕುಣಿವವರು ಮರೆಯಾಗುವರು. ಆಗ ಅದರಲ್ಲಿ ಬಿಷ್ಟು ಪತ್ರದಧ್ವನಿಯಲ್ಲಿ ಪ್ರಕಟನೆ ಮಾಡುತ್ತ ಬರುವ)

ಬಿಷ್ಟು : ಕೇಳಿರಿ–ಕೇಳಿರಿ–ಕೇಳಿರಿ.
ಇದೊಂದು ಸದವಕಾಶ
ಕಳ್ಳ ಸಾಗಣಿದಾರರಿಗೆ, ಕಳ್ಳ ಲೆಕ್ಕ ಬರೆಯುವವರಿಗೆ
ಪರೀಲಿ ಅಗತ್ಯವಿರುವವರಿಗೆ, *Permit* ಬೇಕಾದ
ವರಿಗೆ, ಕಳ್ಳ ದಾಸ್ತಾನುದಾರರಿಗೆ
ಇಗೋ ಬರುತ್ತಿದ್ದಾರೆ–ವಾರಸುದಾರ
ಬಹಿರಂಗ ಕಾಣಿಕೆ ಕೊಟ್ಟು ನೇರವಾಗಿ ವರ ಪಡೆಯಿರಿ
ಅಗೋೕೕ
ಬಂದರು–ಬಂದರು–ಬಂದರು
ಕಾಣಿಕೆಗೆ ಹುಂಡಿಯನು ತಂದರು
ದೇವರಾ ಏಜೆಂಟರು ಬಂದರೋ ಬಂದರು.

(ಇಬ್ಬರು ಶಿಷ್ಯರು ಪರಮೇಶ್ವರಪ್ಪನಿಗೆ ಸ್ವಾಗತ ಸೂಚಿಸುವಂತೆ ನಿಂತಾಗ ಪೂಜಾರಿ ಪರಮೇಶ್ವರಪ್ಪ-ಕೈಮುಗಿಯುತ್ತ ಗಂಭೀರವಾಗಿ ಆಗಮಿಸಿ ಕುರ್ಚಿಯಂತೆ ಬಾಗಿ ಕುಳಿತ ಕಲಾವಿದನ ಮೇಲೆ ಕುಳಿತು)

ಪರಮೇಶ್ವರಪ್ಪ : ನಮಸ್ಕಾರ....ನಮ್ಮ ಮುಂದಿ ಈಗಾಗಲೇ ನಿಮಗೆ ಎಲ್ಲ ಅಂತ ಹೇಳಿರಬೇಕು. ಮಹನೀಯರೆ, ನನಗೆ ನೂರೆಂಟು ಕೆಲಸ–ದೇಶೋದ್ಧಾರದ ಕೆಲಸ. ಆದರೂ ಇದು ಕರ್ತವ್ಯವಾದುರಿಂದ ನಡೆದು ಬಂದಿದ್ದೇನೆ-ಪಾಪವಂತರನ್ನು ಪುನೀತರನ್ನಾಗಿ ಮಾಡುವ ಸಲುವಾಗಿ. ಮಹಾಜನಗಳೇ, ದೇವಸ್ಥಾನ ಕಟ್ಟುವ ಕಾರ್ಯ ಸನ್ನದ್ಧವಾಗಿದೆ. ಆದರಿಂದ ನಿಮ್ಮ ಮನೆ ಬಾಗಿಲಿಗೇ ಬಂದಿದ್ದೇನೆ. ನನಗೆ ವೇಳೆ ಇಲ್ಲ. ಬೇಗಬೇಗ ನಿಮ್ಮ ಕಾಣಿಕೆಗಳನ್ನು ತನ್ನಿ.

ಭಿಕ್ಷುಕ : (ನಿಧಾನವಾಗಿ ಬಂದು) ಸ್ವಾಮಿ, ಬಸ್‌ಸ್ಟ್ಯಾಂಡ್‌ನಾಗೆ ಅಲ್ಲಿ–ಇಲ್ಲಿ ಕೂಲಿನಾಲಿ ಮಾಡ್ಕಂಡು ಜೀವನ ಮಾಡೋ ಭಿಕ್ಷುಕನಾನು....ದೇವರ ಕೆಲಸ ಅಂತಿದ್ರಿ ಅಷ್ಟೆ ನಾನು ಸಂಪಾದ್ಸಿದ್ರಾಗೆ ಹತ್ತು ಪೈಸಾ ಉಳಿಸಿ ತಂದಿನ್ನಿ ಕಾಣಿಕೆ....ತಕಳ್ಳಿ.

ಪರಮೇಶ್ವರಪ್ಪ : (ಸಿಡುಕಿ) ತಂದುಬಿಟ್ಟ ದೊಡ್ಡದಾಗಿ ಕಾಣಿಕೇಂತ ಹತ್ತು ಪೈಸಾ....ನಿನ್ನ ಹತ್ತು ಪೈಸೇಲಿ ನಂಗೆ ಒಂದು ಚಿಟಿಕೆ ನಶ್ಯವೂ ಬರಲ್ಲ....ಇದರಲ್ಲಿ ದೇವಸ್ಥಾನ ಕಟ್ಟಿಸಬೇಕಂತೆ–ಹೋಗಾ–ಹೋಗಾ....

(ಭಿಕ್ಷುಕ ಸಪ್ಪಗೆ ಹೊರಟಾಗ-ಶಿಷ್ಯ ಅವನನ್ನು ತಡೆದು)

ಶಿಷ್ಯ 1 : ಏಯ್, ಸೀದಾ ಅವರ ಹತ್ರ ಯಾಕೋ ಹೋದೆ.... ನಿನ್ನಹಣ ದೇವರಿಗೆ ತಲುಪ್ತೋದು ತಾನೆ ಮುಖ್ಯ

ಭಿಕ್ಷುಕ : (ಸಂತಸದಿಂದ) ಹೌದೌದು....

ಶಿಷ್ಯ 1 : ಹಾಗಾರೆ ಹಾಕು ಈ ಹುಂಡೀಲಿ.

(ಭಿಕ್ಷುಕ ಹಣಹಾಕಿ ತೆರಳುವ. ಆಗ ಒಬ್ಬ ಕಂಟ್ರಾಕ್ಟರ್ ಆಗಮನ. 'ಓಹಿಹಿಹಿ' ಎಂದು ಅವನು ಹಲ್ಲುಬಿಟ್ಟಾಗ ಪರಮೇಶ್ವರಪ್ಪ ಅವನನ್ನು ಕಂಡು)

ಪರಮೇಶ್ವರಪ್ಪ : ಓಹೋ....ತಾವ್ರೋ....ಏನ್ರೀ....ಏನುಮಾಡ್ತಿದೀರಿ ಈಗ ?

ಕಂಟ್ರಾಕ್ಟರ್ : ನಾನು ಈಗ *Building contract* ಮಾಡ್ತಿದೀನಿ ಸಾರ್

ಪರಮೇಶ್ವರಪ್ಪ : ಆಯಿತು....ಸುಮ್ನೇ ಹೀಗೆ ಮಾತಾಡ್ತಿರ್ತೀರೋ.... ದೇವಸ್ಥಾನಕ್ಕೆ ಏನಾದ್ರೂ ಕಾಣಿಕೆ ಕೊಡ್ತೀರೋ....

ಕಂಟ್ರಾಕ್ಟರ್ : ಅಯ್ಯೋ.... ಅದನ್ನ ಹೇಳಬೇಕೆಸಾರ್....ತಾವು ಬರ್ತೀರಿ ಅಂತ ಗೊತ್ತಾದ ತಕ್ಷಣ ಇದ್ದ ಕೆಲಸ ಎಲ್ಲಾ ಬಿಟ್ಟು ಸೀದಾ ಇಲ್ಲಿಗೆ ಬಂದಿದೀನಿ.

ಪರಮೇಶ್ವರಪ್ಪ : ಕಾಣಿಕೆ ಮಾತಾಡ್ತಿ ಅಂದ್ರೆ-ಬಾದಿದೋ ವಿಷಯ ಹೇಳ್ತಿದೀರೆ ?

ಕಂಟ್ರಾಕ್ಟರ್ : ಹಹಹ....ಹತ್ತಲ್ಲ....ನೂರಲ್ಲ....1500 ರೂ.ಗೆ ಚೆಕ್ ತಂದಿದೀನಿ ಸಾರ್

ಪರಮೇಶ್ವರಪ್ಪ : (ಹುಬ್ಬುಗಂಟಿಟ್ಟು) ಏನು ? ಚೆಕ್ ತಂದಿದೀರಾ ?

ಕಂಟ್ರಾಕ್ಟರ್ : (ತಕ್ಷಣ) ಯಾಕೆ ಚೆಕಾ ಬೇಡವಾ....ಆಯಿತು *Cash* ಏ ತಗೊಳ್ಳಿಸಾರ್....

(ಎಂದು ಹಣ ನೀಡಿದಂತೆ mime ಮಾಡುವ)

ಪರಮೇಶ್ವರಪ್ಪ : (ಅವನ ಬೆನ್ನುತಟ್ಟುತ್ತಾ, ಸಂತಸದಿಂದ) *Good*... ನೋಡಿದ್ರಾ ಜನ ಅಂದ್ರೆ ಹೀಗಿರಬೇಕು, ಅದೇನು ವಿನಯ, ಅದೆಷ್ಟು ವಿಧೇಯತೆ,-ಛೇಷ್...ಸೂಕ್ಷ್ಮ ತಿಳಕೊಳ್ಳೋದು ಅಂದ್ರೆ ಹೀಗೆ.

ಕಂಟ್ರಾಕ್ಟರ್ : ಸಾರ್, ಸಿಮೆಂಟ್–ಕಬ್ಬಿಣಕ್ಕೆ ಕೊಂಚತಕರಾರು, ತಾವು ಒಂದುಸಾರಿ *Phone* ಮಾಡಿದ್ರೆ ಬಹಳ ಉಪಕಾರ ಆಗೋದು.

ಪರಮೇಶ್ವರಪ್ಪ : ಏನು ? ನಿಮಗೆ ಬೇಕಾದ ಸಿಮೆಂಟ್, ಕಬ್ಬಿಣಕ್ಕೆ ನಾನು *Phone* ಮಾಡಬೇಕೆ ?

ಕಂಟ್ರಾಕ್ಟರ್ : ಹೌದ್ಸಾ....ನಿಮ್ಮ ದೇವಸ್ಥಾನಕ್ಕೆ ಬೇಕಾದ್ರೆ ಇನ್ನೂ ಒಂದುಸಾವಿರ ಕಾಣಿಕೆ ನಾಳೇನೇ ತಕ್ಕೊಳ್ಳಿ–

ಪರಮೇಶ್ವರಪ್ಪ : ಹಾಗಾದ್ರೆಸರಿ....*Phone* ಮಾಡಿಸ್ತೀನಿ....

ಕಂಟ್ರಾಕ್ಟರ್ : ಹಹಹ....ಹಾಗಾದ್ರೆ ನಾಳೆ ಬರ್ಲಾ ಸಾರ್....

ಪರಮೇಶ್ವರಪ್ಪ : ನಾಳೆಬೇಡ–ನಾಡಿದ್ದು ಬನ್ನಿ-

ಕಂಟ್ರಾಕ್ಟರ್ : (ಜೋರಾಗಿ) ಸಾರ್... ಒಂದುಸಾರಿ *Phone*....

ಪರಮೇಶ್ವರಪ್ಪ : ಆಯಿತು ಅಂದ್ನಲ್ಲ

ಕಂಟ್ರಾಕ್ಟರ್ : ಸರಿ ಸರಿ–ಸರಿ (ಎಂದು ಬಿರ ಬಿರ ಹೋಗುವ)

(ಹೋಟೆಲ್ ಮಾಲೀಕ ಓಡೋಡುತ್ತಬಂದು-ಅತ್ತ-ಇತ್ತ ನೋಡಿ)

ಹೋಟೆಲ್‌ನವ : ನಮಸ್ಕಾರ ಸಾ....

(ಏನೂ ಪ್ರತಿಕ್ರಿಯೆಯಿಲ್ಲದಾಗ ಇನ್ನೂ ಎತ್ತರದ ದನಿಯಲ್ಲಿ "ನಮಸ್ಕಾರ ಸಾ" ಎನ್ನುವ. ಪರಮೇಶ್ವರಪ್ಪ ಅತ್ತತಿರುಗಿ)

ಪರಮೇಶ್ವರಪ್ಪ : ಯಾರ್ರೀ ನೀವು ?

ಹೋಟೆಲ್‌ನವ : (ಕೈಮುಗಿದು) ಮರೆತ್ರೀ ಬಿಟ್ರಾ ಸಾ....ಕಳೆದವರ್ಷ ನಮ್ಮ ಹೋಟೆಲ್ ಓಪನಿಂಗ್ ಸೆರಮನಿ ನೀವೇ ನಡೆಸಿ ಕೊಟ್ರಲ್ಲ ಸಾ....

ಪರಮೇಶ್ವರಪ್ಪ : ಹಾಂ!!....ಮೊನ್ನೆ *Ride* ಆದ್ದು ನಿಮ್ಮ ಹೋಟ್ಲೇ ಆಲ್ವೇನ್ರಿ) ?

ಹೋಟೆಲ್‌ನವ : (ಬಳಿಬಂದು) ಅದನ್ನೇ ತಮ್ಮಲ್ಲಿ ಅರಿಕೆ ಮಾಡ್ಕೊಳ್ಳೋಣ ಅಂತ ಬಂದೆಸಾ...ದಯಮಾಡಿ ಇನ್ನು ಮುಂದೆ *Ride* ಆಗೋ ಸೂಚನೆ ಇದ್ರೆ ಒಂದುದಿನ ಮುಂಚೆ *Phone* ಮಾಡೋಕೆ ಹೇಳ್‌ಬಿಟ್ರೆ–ಮಿಕ್ಕ

ಬಂದೋಬಸ್ತೆಲ್ಲ ಸರೀಗ್ ಮಾಡ್‌ಬಿಡ್ತೀನಿಸಾರ್ ನಾನು...ಅಂದ್ರೆ ತಾವು ದೊಡ್ಡಮನಸ್ಸು ಮಾಡಬೇಕು....

ಪರಮೇಶ್ವರಪ್ಪ : ಹೀಗೆ ನಿಮ್ಮದೇ ನೀವು ಹೇಳ್ತಿರ್‌ತೀರೋ–ಕಾಣಿಕೆ ಕೊಡ್ತೀರೋ....

ಹೋಟೆಲ್‌ನವ : ತಾವು ಬರ್ತೀರಿ ಅಂತಗೊತ್ತಾದ ತಕ್ಷಣ–ಗಲ್ಲಾ ಪೆಟ್ಟಿಗೆ ಎಳೆದು, ಇದ್ ಬದ್ದದ್ದೆಲ್ಲ ಬಾಚ್ಕೊಂಡು (ಜೋರಾಗಿ) ಐನೂರು ರೂಪಾಯಿ ತಂದಿದೀನಿಸಾರ್

ಪರಮೇಶ್ವರಪ್ಪ : ಏನು ದೊಡ್ಡದಾಗಿ ಐನೂರು ಅಂತ ಹಾಗೆ ಬಾಯಿ ಬಿಡ್ತೀರಿ-ಏನೋ ಚಿಲ್ರೆ ಒಂದ್ಸೈನೂರು ತಂದಿದೀನಿ ಅನ್ನಿ (ಹೋಟೆಲ್‌ನವ ಸಪ್ಪಗಾಗಿ –ಜೇಬ್ಗೆ ಹಣ ಹಾಕುವ)

ಹೋಟೆಲ್‌ನವ : ಸಾರ್....ಅಕಸ್ಮಾತ್ ರೈಡ್ ಆಗೋದಿದ್ರೆ ಒಂದು ಫೋನು

ಪರಮೇಶ್ವರಪ್ಪ : ನಿಮಗೆ *Phone* ಮಾಡೋದುಬಿಟ್ಟು, ನಂಗಿನ್ನೇನು ಕೆಲ್ಸ ಇಲ್ಲ ಅಂದ್ಕೊಂಡ್ರಾ...

ಹೋಟೆಲ್‌ನವ : ಹಾಗಲ್ಲಸಾರ್.... ಬೇಕಿದ್ರೆ ಮುಂದಿನವಾರ ನಿಮ್ಮ ದೇವಸ್ಥಾನಕ್ಕೆ 10 ಅಲ್ಲ 15ಸಾವಿರ ಕಾಣಿಕೆ ತಲುಪಿಸೋಕೆ ಏರ್ಪಾಟು ಮಾಡ್ತೀನಿಸಾರ್.

ಪರಮೇಶ್ವರಪ್ಪ : ಹಾಗಾರೆ ಸರಿ...ಮನೇಹತ್ರ ಬನ್ನಿ.

ಹೋಟೆಲ್‌ನವ : ಸರಿಸಾರ್...(ಹೊರಡುವ ಏನೋ ನೆನಪಿಸಿಕೊಂಡು) ಸಾರ್....ಯಾವ ಮನೇಹತ್ರ ಬನ್ನಿ–ಈಮನೇಗೋ– ಆ ಮನೇಗೋ...

ಪರಮೇಶ್ವರಪ್ಪ : (ಕೋಪದಿಂದ ತಿರುಗಿ) ಏನಂದೆ ?

ಹೋಟೆಲ್‌ನವ : ಅಲ್ಲಸಾರ್....ತಮಗೆ ಎರಡು ಮನೆ ಇದೆಯಲ್ಲ ಸಾರ್...ಅದಕ್ಕೆ ಕೇಳಿದೆ...ಈಮನೇಗೆ ಬರ್ಲೋ–ಆ ಮನೇಗೆ ಬರ್ಲೋ ಅಂತ.

ಪರಮೇಶ್ವರಪ್ಪ : (ಗೊಣಗುತ್ತ) ಥೂಂ ಮರ್ಯಾದೆ ತೆಗೀತಾನೆ ಬೀದೀಲಿ ಹಾಳಾದವನು

ಹೋಟೆಲ್‌ನವ : ಏನಂದ್ರಿಸಾರ್.

ಪರಮೇಶ್ವರಪ್ಪ : ಏನಿಲ್ಲ....ಆ ಮನೇಹತ್ರವೇ ಬಾ....

ಹೋಟೆಲ್‌ನವ : ಸರಿಸಾರ್....(ಹೋಟೆಲ್‌ನವ ಹೊರಡುವ)

(ಕೂಲಿಯೊಬ್ಬ ಮೂಟೆಹೊತ್ತಂತೆ mime. ಸುಸ್ತು...ಆಗ ಒಬ್ಬ ಹುಡುಗ ಇಡ್ಲಿ ಮಾರುತ್ತ ಬರುವ)

ಇಡ್ಲಿ : ಇಡ್ಲಿ–ಇಡ್ಲಿ–ಬಿಸಿ ಬಿಸಿ ಇಡ್ಲಿ
ಇರೋದೇ ಸ್ವಲ್ಪ ರುಚಿರುಚಿ ಇಡ್ಲಿ
ಬೇಕೆ ಇಡ್ಲಿ–ಫಸ್ಟ್‌ಕ್ಲಾಸ್ ಇಡ್ಲಿ

ಕೂಲಿ : (ಮೂಟೆ ಇಳಿಸಿದಂತೆ ನಟಿಸಿ) ಅಪ್ಪಾ...ಹಸಿವು....
ಇಲ್ಲೇ ಏನಾದೂ ತಿನ್ಕೋಣ....ಹ್ಯಾಗಿದ್ರೂ ಯಾರೋ
ಇಡ್ಲಿ ಮಾರ್‍ತಿದಾನೆ ಇಲ್ಲಿ ಪುಣ್ಯಕ್ಕೆ....
(ಕೂಲಿ ಅವನ ಬಳಿ ಹೋಗುತ್ತಿದ್ದಾಗ, ಶಿಷ್ಯ-1 ಎತ್ತರದ ದನಿಯಲ್ಲಿ ಕೈಚಾಚಿ ಹೇಳುವ)

ಶಿಷ್ಯ : ಪಾಪವ ತೊಳೆದು ಪುನೀತರಾಗಲು
ಇರುವುದು ಒಂದೇ ದಾರಿ
ನೀಡಿರಿ ಹಣವ ದೇವಸ್ಥಾನಕೆ
ಅದುವೇ ಮುಕ್ತಿಗೆ ದಾರಿ
(ಕೂಲಿ ಅವನ ಮಾತಿಗೆ ಬೆಪ್ಪಾಗಿ ನಿಂತು-ನಿಧಾನವಾಗಿ ಇಡ್ಲಿಯವನ ಕಡೆನೋಡಿ ಮತ್ತೆ ಶಿಷ್ಯನತ್ತಲೇ ಕತ್ತು ತಿರುಗಿಸಿದಾಗ ಇಡ್ಲಿಯವ 'ಇಡ್ಲಿ-ಇಡ್ಲಿ' ಎನ್ನುವ)

ಇಡ್ಲಿ : ಇಡ್ಲೀೀ–ಇಡ್ಲೀೀ....

ಶಿಷ್ಯ1 : ದೇವರ ಕಾಣಿಕೆ

ಇಡ್ಲಿ : ಇಡ್ಲೀ–ಇಡ್ಲೀ

ಶಿಷ್ಯ2 : ಕಾಣಿಕೆ ಕಾಣಿಕೆ

ಇಡ್ಲಿ . ಇಡ್ಲೀ–ಇಡ್ಲೀ

ಶಿಷ್ಯ : ಕಾಣಿಕೆ ಕಾಣಿಕೆ
(ಹೀಗೆ ಒಬ್ಬರಿಗಿಂತ ಒಬ್ಬರು ಎತ್ತರದ ಧ್ವನಿಯಲ್ಲಿ ಅರಚು
ದಾಗ-ಕೂಲಿ ಅತ್ತ-ಇತ್ತ-ಕೂಗು ಬಂದತ್ತ ಕತ್ತು ತಿರುಗಿಸಿ-
ಕೊನೆಗೆ ಕೆನ್ನಗೆ ಹೊಡೆದು ಕೊಂಡು ಶಿಷ್ಯನ ಹುಂಡಿಗೆ ಹಣ
ಹಾಕುವ)

ಇಡ್ಲಿ : ಯಾಕಯ್ಯೋ....ಇಡ್ಲಿ ಬೇಡವಾ ?
ಕೂಲಿ : ಇಡ್ಲಿ ದೇವರಿಗಿಂತ ಎಚ್ಚೇನಯ್ಯೋ....ನಮ್ಮ ತಾತಂಗೆ
ಉಸಾರಿಲ್ಲ ಬಾಯಿಲಿ ಮಲಗವ್ನೆ....ಕಾಣಿಕೆ ಹಕ್ದೆ
ಓದ್ರೆ ದೇವರಿಗೆ ಕ್ವಾಪಬರ್ತದೆ....ಅದ್ಕೇಲಿನಾರಾ ಅವ್ನು
ಸಾಪಕೊಟ್ಟು ನಮ್ಮತಾತಂಗೆ ಎಚ್ಚಾಮಿ ಆದ್ರೆ....
ಬ್ಯಾಡಪ್ಪೊ...ಹಸಿವದ್ರೂ ಚಿಂತಿಲ್ಲ-ಕಾಣಿಕೆ ಮೊದಲು
ಇಡ್ಲಿ : ಹೋ....ಆ ದೇವ್ರು ಏನಾದ್ರೂ ಇಡ್ಲಿ ತಿನ್ಬೇಡಿ ಅಂತ
ಹೇಳಿದಾನೇನಪ್ಪ ....ಛೀ........ ನಿಮ್ಮಂತವರಿಂದಲೇ
ನಮ್ಮ ವ್ಯಾಪಾರವೂ ಅಷ್ಟೆ....ಇದ್ದ ಕಾಸೆಲ್ಲ ಇಲ್ಲಿ ಅವನ
ಒಟ್ಟೆಮೇಲೆ ತಣ್ಣೀರುಬಟ್ಟೆ ಹಾಕಿಕೊಂಡು ಹೋಗ್
ಬಿಟ್ರೆ....ಹೀಗಾದ್ರೆ ಉದ್ಧಾರವಾದಹಾಗೆ ನಮ್ಮಂತ
ವರು....ಛೀ....ತಾನೂ ಹಸ್ಕೊಂಡು ನಮ್ಮಂತೋರ
ಒಟ್ಟೇಮೇಲೂ ಕಲ್ಲು ಹಾಕು ಅಂತ ಯಾವದೇವರು-
ಎಲ್ಲಿ ಹೇಳಿದಾನ್ರೀ...ಹುಂಂಂ ಇಡ್ಲಿ-ಇಡ್ಲೀ
(ಎಂದು ಅರಚುತ್ತ ನಡೆದು ಮರೆಯಾಗುವ)
ಗುಮಾಸ್ತ : (ಪಂಚೆ, ಕೋಟು ಧರಿಸಿದ ವ್ಯಕ್ತಿ ಗೂನ ನಂತೆ ನಡೆದು ಬಂದು)
ಆಡ್ ಬಿಟ್ಟೆ ದೇವರು .... ನಾನೊಬ್ಬ *ordinery*
ಗುಮಾಸ್ತ....ಸಂಸಾರದ ಹೊರೆ ಹೊತ್ತೂ-ಹೊತ್ತೂ
ಬೆನ್ನು ಸ್ವಲ್ಪ ಗೂನಾಗಿದೆ ಅಷ್ಟೆ.
ಪರಮೇಶ್ವರಪ್ಪ : ನಿನ್ನ ಗೂನಿನ ಕತೆಕಟ್ಕೊಂಡು ನನಗೇನಾಗಬೇಕು....
ನಾನು ಕೇಳ್ತಿರೋದು ದೇವಸ್ಥಾನಕ್ಕೆ ಕಾಣಿಕೆ.
ಗುಮಾಸ್ತ : ನಮ್ಮಂಥ ಬಡವರು ಏನುಕೊಟ್ಟೇವು ಸಾರ್....ಆದ್ರೂ

ತಾನೇ ಖುದ್ದಾಗಿ ಬಂದಿದೀರಿ ಅಂತ, ನನ್ನ ಹೆಂಡ್ತಿ ಅಲ್ಪಸ್ವಲ್ಪ ಸಾಸುವೆಡಬ್ಬೀಲಿ ಉಳಿಸಿಟ್ಟ ಚಿಲ್ರೆ ಎಲ್ಲ ಗೆಬರ್‌ಕೊಂಡು ಒಟ್ಟು ಹತ್ತು ರೂಪಾಯಿ ತಂದಿದೀನಿ ಸಾರ್

ಪರಮೇಶ್ವರಪ್ಪ : ಏನು? ಹತ್ತುರೂಪಾಯಿ ತಂದಿದೀನಿ ಅನ್ನಕ್ಕೆ ನಾಚಿಕೆ ಆಗಲ್ಲ....ಇಲ್ಲಿ ಬಂದಿರೋ ನಾನು ಯಾರು ? ಪರಮೇಶ್ವರಪ್ಪ....ನಾನು ಅಂದ್ರೇನು–ನನ್ನ ಘನತೆಏನು? ಗೌರವಏನು ? ಯೋಗ್ಯತೆಏನು? ನಾನು ಖುದ್ದಾಗಿ ನಿಮ್ಮಮನೆ ಬಾಗಿಲಿಗೆ ಬಂದ್ರೆ ಹತ್ತುರೂಪಾಯಿ.... ನಾನ್‌ಸೆನ್ಸ್...ತೆಗೀರಿ ನೂರು ರೂಪಾಯಿ.

ಗುಮಾಸ್ತ : ....(ಗಾಬರಿ) ಹಾ..........ನೂರುರೂಪಾಯಿ !! ಸಾರ್....ನಮ್ಮಂಥವರು ಉಸಿರಾಡಿಕೊಂಡು ಬದುಕಿರೋದೇ ಕಷ್ಟವಾಗಿರೋಕಾಲ ...ಮಕ್ಕಳಿಗೆ ಎರಡು ಹೊತ್ತು ಹೊಟ್ಟೆತುಂಬ ಊಟ ಹಾಕಬೇಕಾದರೆ ಕಣ್‌ ಕಣ್ ಬಿಡಬೇಕಾದ ಪರಿಸ್ಥಿತಿ....ಹೊಟ್ಟೆಗಾದ್ರೆಬಟ್ಟೆಗಿಲ್ಲ ಬಟ್ಟೆಗಾದರೆ ಹೊಟ್ಟೆಗಿಲ್ಲ....ಅಂತಾದ್ರಲ್ಲಿ ನೀವು ಏಕ್ದಂ ನೂರುರೂಪಾಯಿ ಅಂದ್ರೆ *heart failure* ಆಗಿ ಬಿಡತ್ತೆ...

ಪರಮೇಶ್ವರಪ್ಪ : ಇಂಥ ಕುಂಟುಕಾರಣಗಳು ನನಗೆ ಬೇಕಾಗಿಲ್ಲ–ಕಾಣಿಕೆ ಅಂದ್ಮಲೆ ಕಾಣಿಕೆ ಕೊಡ್ಲೇಬೇಕು.

ಗುಮಾಸ್ತ : ನೂರು ರೂಪಾಯಿ ಅಂತ ಹೀಗೆ ಒತ್ತಾಯ ಮಾಡಿದರೆ ನಮ್ಮಂತಾ ಬಡವರು ಎಲ್ಲಿಂದ ತರೋಣಸಾರ್ ?

ಪರಮೇಶ್ವರಪ್ಪ : ಮೈಗಳ್ಳತನ ಮಾಡಿದರೆ ಬಡವನಾಗೇ ಸಾಯಬೇಕು– ದುಡಿ–ಸಂಪಾದಿಸು–ಕೊಡು ಕಾಣಿಕೆ.

ಗುಮಾಸ್ತ : ಮೈಗಳ್ಳ ಅನ್‌ಬೇಡ್ರಿ ಲ್ಲಸಾರ್ ....ಬಡವರಷ್ಟು ದುಡಿಯೋರು ಬೇರೆ ಎಲ್ಲಿದಾರೆಸಾರ್ ?

ಪರಮೇಶ್ವರಪ್ಪ : ಏನಯ್ಯಾ....[illegible] ಮಾತಾಡ್ತಿದಿ....ಎಲ್ಲಿ ಕೆಲಸ ಮಾಡೋದು ?

ಗುಮಾಸ್ತ : (ತಕ್ಷಣ ಅವನ ಕಾಲಮೇಲೆ ಬಿದ್ದು) [illegible]ಸಾರ್ [illegible]... [illegible] ...ತಿಂಗಳಿಗಿಷ್ಟು [illegible] ಕೊಡ್ತೀನಿ ಆ [illegible] ರೂಪಾಯಿ [illegible]ಸಾರ್ .... ಮೊದಲಕಂತು ಹತ್ತು ರೂಪಾಯಿ.

ಪರಮೇಶ್ವರಪ್ಪ : ಛೆ....ಮೇಜಿನ ಕಾಣಿಕೆಗೂ *Instalment* ಏನ್ರಿ ?

ಗುಮಾಸ್ತ : ನಮ್ಮಂಥವರ ಪಾಲಿಗೆ ಎಲ್ಲವೂ *Instalment* ಸಾರ್...ಇಲ್ಲಾಂದ್ರೆ ನಾವು ಬದುಕೋದಾದ್ರೂ ಹ್ಯಾಗೆ ?

ಪರಮೇಶ್ವರಪ್ಪ : *No....No...*

ಶಿಷ್ಯ 1 : ಹೋಗ್ಲಿ ಬಿಡಿಸಾರ್....[illegible] *Instalment* [illegible].

ಶಿಷ್ಯ 2 : ಹೌದುಸಾ !

ಪರಮೇಶ್ವರಪ್ಪ : ಸರಿ....ಆದು ನಿಮ್ಮ ಜವಾಬ್ದಾರಿ.

ಶಿಷ್ಯ : ಬೋ....ಕೊಡ್ರಯ್ಯ [illegible] ಕಾಣಿಕೆ

([illegible])

ಶಿಷ್ಯ 1 : (ಪರಮೇಶ್ವರಪ್ಪನ ಬಳಿ ಓಡಿಬಂದು) ಸಾರ್....ಆ ಮನುಷ್ಯನ್ನ ಕೇಳಿಸಾ....

ಶಿಷ್ಯ 2 : ಆತ....ಭಾರಿ *smuggler* ಸಾರ್

ಶಿಷ್ಯ 1 : ದುಡ್ಡು ಅಂದ್ರೆ ಹುಣಿಸೆಬೀಜ ಅವನಿಗೆ

ಶಿಷ್ಯ 2 : ನಿಜ ನಿಜ....ರೀ....(ಎಂದು ಅವನನ್ನೇ ಕರೆವ)

([illegible] smuggler stylish ಆಗಿ [illegible] ಕೃತಕವಾದ [illegible] ನಿಲ್ಲುವ)

ಪರಮೇಶ್ವರಪ್ಪ : (ಅವನನ್ನೇನೋಡಿ) ಹಾ....ಏನ್ರೀ ನಿಮ್ಮ *Business* ?

ಸ್ಮಗ್ಲರ್ : *Business* .... ಹಹಹ...ಒಂದೊಂದು ಊರಲ್ಲಿ ಒಂದೊಂದು *Business*.

ಪರಮೇಶ್ವರಪ್ಪ : ಹೆಸರು ?

ಸ್ಮಗ್ಲರ್ : ಅದೂ ಅಷ್ಟೆ.... ಒಂದೊಂದು ಊರಲ್ಲಿ ಒಂದೊಂದು ಹೆಸರು

ಪರಮೇಶ್ವರಪ್ಪ : ಸರಿ....ದೇವಸ್ಥಾನಕ್ಕೆ ನಿಮ್ಮ ಕಾಣಿಕೆ?

ಸ್ಮಗ್ಲರ್ : ದೇವಸ್ಥಾನ ! ...ಹಹ....ಎಷ್ಟು ದೇವಸ್ಥಾನ... ? ಎಲ್ಲೆಲ್ಲಿ?....ಯಾವಯಾವ ಹೊತ್ತಿಗೆ ಸಿದ್ದ ಇರಬೇಕು ಹೇಳಿ–ಮನೇಲಿ ಹೋಗಿ ಮಲಿಕ್ಕೊಳ್ಳಿ....ನೀವು ಹೇಳುವ ಹೊತ್ತಿಗೆ ಒಂದಲ್ಲ–ಎರಡಲ್ಲ–ಮೂರಲ್ಲ–ನಾಲ್ಕು ದೇವಸ್ಥಾನ *Ready* ಇರತ್ತೆ....*o.k.*

ಪರಮೇಶ್ವರಪ್ಪ : ಹಾ....

ಶಿಷ್ಯ 1 : *yes* ಅನ್ನಿಸಾರ್.... ಅವರು ನಾಲ್ಕು ದೇವಸ್ಥಾನ ಕಟ್ಟಿಸಿದರೆ–ನಾವು ನಾಲ್ಕು ಜನ ಎರಡು ಹೊತ್ತು ಹಾಯಾಗಿ ಊಟ ಮಾಡ್ಕೊಂಡು–ದಿಂರಂಗಾ ಅಂತ ಅದರ *incharge* ಆಗಿ ಇದ್ ಬಿಡಬಹುದು.

ಶಿಷ್ಯ 2 : ಹೂಂ ಅನ್ನಿಸಾರ್.... ದೇವರ ಹೆಸರಿನಲ್ಲಿ ನಮ್ಮ ಜೀವನವಾಗುತ್ತೆ ಸರಾಗವಾಗಿ

ಶಿಷ್ಯ 1 : ನಿಜಾಸಾರ್.... *yes* ಅನ್ನಿಸಾರ್.

ಪರಮೇಶ್ವರಪ್ಪ : (ರೇಗಿ) ಇದೇ ನಿಮಗೆ ತಿಳಿಯಲ್ಲ ಅನ್ನೋದು. ಕತ್ತೆಗಳು ಕತ್ತೆಗಳು.... ಹಾಗೆ ಮಾಡಿದರೆ ನಾಳೆ ಅವನು ಸಿಕ್ಕಿ ಹಾಕಿಕೊಂಡಾಗ ನನ್ನ ಹೆಸರೂ ಅವನ ಜತೆ ಬಯಲಿಗೆ ಬರಲ್ವೆ ?.... ಊರ ಜನರ ಹತ್ತಿರ್ಲಿ ಹಣ ವಸೂಲಿ ಮಾಡಿ, ನನ್ನ ಹೆಸರಿನಲ್ಲಿ ದೇವಸ್ಥಾನ ಕಟ್ಟಿಸೋದಲ್ವೆ ಮುಖ್ಯ.

ಶಿಷ್ಯ 1 : ಸರಿಸಾರ್.

ಶಿಷ್ಯ 2 : ಕೇಳಿಸಾರ್ ಹಾಗಾರೆ ಕಾಣಿಕೆ

ಪರಮೇಶ್ವರಪ್ಪ : ಏನ್ರೀ *Mr*..... ಕಾಣಿಕೆ ವಿಷಯಕ್ಕೆ ಬನ್ನಿ ಈಗ ?

ಸ್ಮಗ್ಲರ್ : ಕಾಣಿಕೆ....*ok*....ತಗೊಳ್ಳಿ ಐದು ಸಾವಿರಕ್ಕೆ ಒಂದು ಚೆಕ್ಕು

ಶಿಷ್ಯ 1 : (ಜೋರಾಗಿ) ಸಾರ್ !!...ಚೆಕ್ ಬೇಡಾ ಅನ್ನಿಸಾರ್

ಶಿಷ್ಯ 2 : ಏನಿದ್ರೂ ಕ್ಯಾಷ್

ಸ್ಮಗ್ಲರ್ : ಚೆಕ್ ಬೇಡಾ.... *ok*.... ತಗೊಳ್ಳಿ *cash*....
[ಶಿಷ್ಯರಿಗೆ ಹಣ ನೀಡುವ]

ಶಿಷ್ಯ 1 : (ಕಣ್ಣರಳಿಸಿ) ಹಹಹ....... ಖೋಟಾ ನೋಟು ಅಲ್ಲತಾನೆ ?

ಸ್ಮಗ್ಲರ್ : (ವ್ಯಂಗ್ಯ) ಇಲ್ಲ, ಕೊಡಮುತ್ತೂರು ನೋಟು–ಮಾತಾಡೋದು ನೋಡಲಿಲ್ಲ. ತಗೊ ತಗೊ ಸಾಚಾ ನೋಟೇ....

ಶಿಷ್ಯ 1 : (ಇನ್ನೊಬ್ಬ ಶಿಷ್ಯನಿಗೆ) ಸಾಚಾ ನೋಟಾದ್ರೆ ಅರ್ಧ ಡಬ್ಬೀಗೆ ಹಾಕಿ, ಇನ್ನರ್ಧ ಇಬ್ಬರೂ ಹಂಚಿಕೊಂಡು ಲಪಟಾಯಿಸೋಣ ಅಂತ.

ಸ್ಮಗ್ಲರ್ : ನನಗೆ ಗೊತ್ತಿಲ್ವೇ ನಿಮ್ಮ ಯೋಗ್ಯತೆ....
(ಎಂದು ಬಿರುಸಿಂದ ನಡೆವ. ಸೈರನ್ ಕೂಗಿದ ಸದ್ದು)

ಶಿಷ್ಯ : ಸಾರ್.... ಫ್ಯಾಕ್ಟರಿ ಮಾಲೀಕ........ ಕಾರ್ಮಿಕರು ಮಾಲೀಕ....... ಶ್....... (ತಡೆಯುವ) ಶ್ರಮ–ದುಡಿಮೆ, ಶೋಷಣೆ–ಗಬ್ಬುವಾಸನೆ.
[ಟಿಪ್‌ಟಾಪಾಗಿ ಬಟ್ಟೆಧರಿಸಿದ ಮಿಲ್ ಮಾಲೀಕ-ಚುಟ್ಟಾ ಸೇದುತ್ತಾ ಬರುವ]

ಮಾಲೀಕ : ಹಾಯ್.... ಪರಮೇಶ್...

ಪರಮೇಶ್ವರಪ್ಪ : ಹ್ಯಾಗಿದೆಯಯ್ಯ ನಿನ್ನ *factory–strike–lockout*....?

ಮಾಲೀಕ : ನಿಮ್ಮ ಕೃಪಾಕಟಾಕ್ಷ ಇರೋವರ್ಗೆ ನನ್ಗೆಯಾವ ಯೋಚನೆಯೂ ಇಲ್ಲವಲ್ಲ

ಪರಮೇಶ್ವರಪ್ಪ : ನಮ್ಮದೇನಿದೆ.... ಎಲ್ಲ ಆ ಪರಮಾತ್ಮನ ಕೃಪೆ

ಮಾಲೀಕ : ಓ....ಕಾಣಿಕೆ....ಮರ್ತೆ....

[ಎಂದು ಕಂತೆ-ಕಂತೆ ನೋಟುಗಳನ್ನ ಹಾಕುವ]

ಪರಮೇಶ್ವರಪ್ಪ : ಎಲ್ಲಾ ಸರಿ.... ಆದರೆ ಕಾರ್ಮಿಕರ ವಿಚಾರದಲ್ಲಿ ತುಂಬಾ ಹುಶಾರಾಗಿರು

ಮಾಲೀಕ : ಎಷ್ಟಾಗಲಿ....*workers*.... ಎಷ್ಟುದಿನ ಉಪವಾಸ ಇರ್ತಾರೆ... ಒಂದು ದಿನ ಉಪಾಸ ಇದ್ದಾರು–ಎರಡು ದಿನ ಉಪಾಸ ಇದ್ದಾರು....ಮೂರನೇದಿನ ನನ್ನಕಾಲಿಗೆ ಬಂದು ಬಿದ್ದೇ ಬೀಳ್ತಾರೆ.... ಇದಕ್ಕೆಲ್ಲ ಯಾರನ್ನ ಸರಿಮಾಡಬೇಕೂ ಅನ್ನೋದು ಗೊತ್ತಾದ್ರೆ ಸಾಕು [ಎಂದು ಹೊರಡುವ]

ಶಿಷ್ಯ 1 : ಇವನ ಘೋರಣೆಗಿಷ್ಟು ಬೆಂಕಿ ಹಾಕ.... ಕಾರ್ಮಿಕರನ್ನೇ ಅಂತಾನಲ್ಲ....ಈ ಜನ ಎಲ್ಲ ಮನಸ್ಸು ಮಾಡಿ ಈ ಕಾರ್ಮಿಕರಿಗೆಲ್ಲ ಒಂದೊಂದು ತುತ್ತು ಅನ್ನಕೊಟ್ರೆ ಇವ ಬಗ್ಗೋವರಗೂ-ಹಳಿ ಬಿಡಲಾರರು....ಮುಗೀತಲ್ಲ ಇವನ್ಕತೆ.

[ಕೋಟು–ಟೋಪಿ–ಕನ್ನಡಕ–ಕೆಂಪು ವಸ್ತ್ರಧರಿಸಿದ ಮೇಸ್ಟರು ವೇದಿಕೆಗೆ ದಡಕ್ ಎಂದು ನುಗ್ಗಿ]

ಮೇಸ್ಟರು : (ಜನದ ಕಡೆ) ಏಯ್.... ಏನು ಹಾಗೆ ದಡಕ್ ಅಂತ ದಬ್ಬೀರಿ.... ಹಾ....... (ಬಟ್ಟೆ ಸರಿ ಮಾಡಿಕೊಂಡು) ನೋಡಿ, ನಾನೊಬ್ಬ ಪಕ್ಕದ ಹಳ್ಳಿ–ಮಟದಯ್ಯ–ಮೇಸ್ಟರು ಅಂತಾನೂ ಕರೀತಾರೆ..ಅಪರೂಪಕ್ಕೆ ಇವತ್ತು ನಮ್ಮ ಮನೇ ನಲ್ಲೀನಲ್ಲಿ ನೀರು ಬಂದಿತ್ತು.... ನನ್ನ ಎಂಡ್ರು ಬಿಸಿಬಿಸಿಯಾಗಿ ನೀರುಕಾಸಿ ಎಣ್ಣೆ ನೀರು ಆಕ್ತೀನಿ ಅಂದಳು....ಅಷ್ಟರಾಗೆ ಅಳ್ಳೀಯಕ್ಕೆಲ್ಲ ಬಂದು ಬುದ್ಧಿಯೋರು ಬತ್ತಾರೆ.... ನಮ್ಮ ಅಳ್ಳೀ ಜನಗಳ ಕಷ್ಟಸುಖ ಏಳ್ಳೀಬೇಕು ಅಂತ ನನ್ನ ಕರಕೊಂಡು

ಬಿಸಿಲ್ಯಾನ ಇಟ್ಟುಕೊಂಡು ಬಂದಂಗೆ ಎಳ್ಕೊಂಬಂದು
ಇಲ್ಲಿ ದಬ್ಬಿದ್ರು....

ಪರಮೇಶ್ವರಪ್ಪ : ಇಲ್ನೋಡಿ... ಇಲ್ಲಿ....

ಮೇಷ್ಟ್ರು : ಇಲ್ಲೇಳಿ ನೋಡಿ.... ನೀವು ಬಿಟ್ಟಿಲ್ಲ ಬೀದೀಗೆ ಅಂತ ಶಾಸನ ಮಾಡಿಸೊಂಬರಾದ ಅಂತ ನನ್ಗೆ ಅನಿಸ್ತಿದೆ... ಅದರ ಜೊತೆ ನಮ್ಮಗಿಂತ ಅಕಾಸ ತ್ತೊಗಿದೆ... ಅದ್ಕೆ ನಾನು ಅಂ-ಬಾನ್ನು-ಕಾದು ಮನೂತದನಿಸಿ - ನಮ್ಮಲ್ಲಿ ಜನಗಳ ಸ್ವಾತಂತ್ರ್ಯ ಗಂಟುಮೂಟೆ ಕಟ್ಟಿಕೊಂಡು ತಮ್ಮ ಪಾದದ ಅಚ್ಚು ಮುದ್ರಿಸ್ಬಿಟ್ರು....ಒಸಿ ಅವರ ಕಣ್ಣುತೆರೀಗೆ ಅಕ್ಕಂಬೇಕು

ಪರಮೇಶ್ವರಪ್ಪ : ತೆಪ್ಪ ಮಾತಾಡ್ಬೇಡ್ರಿ- ಕಿವಿಗೆ ಬೀಳಬಾರ್ದ್ಗೆ ಕಾಣಿಕೆ....

ಮೇಷ್ಟ್ರು : ಮುಂಚೆ ನಮ್ಮ ಮಾತು ಕೇಳ್ಬೇಗೆ ಅಕ್ಕಿಲ್ಲ....ಅವರ್‌ಗೆ ಜೀವನವ್ಯಾಸದ ಶಕ್ತಿ ಬರಲಿ.... ನೋಡಿ ನೋಡಿ.... ನಮ್ಮ ಅಕ್ಕಪಕ್ಕದ ಒಂದು ಅಜ್ಜಿ ಇಲ್ಲ....ಮೊನ್ನೆ ಒಂದು ಮಂಗೀಗೆ ಹುಡುಗ್ ಹಾರಿಬಿಟ್ಟ.... ಬೆಂಗಳೂರಿನಾಗೆ ದೊಡ್ಡಾಸ್ಪತ್ರೇಗೆ ಕರ್ಕೊಂಡೋಗ್ದೆ ಮಗಾ ಉಳೀತಿದ್ದ ಅಂದ್ರು.... ಕಾಲನಾಗೆ ಕರ್ಕೊಂಡು ಬಂದ್ರೆ ....ಮಧ್ಯದಾಗೆ ಮಗ ಗೊಟಕ್ ಅಂತ ಅಂದ್ಬಿಟ್ಟ.... ನಮ್ಮೂರಿನಾಗೆ ಒಂದು ಆಸ್ಪತ್ರೆ ಇದ್ದಿದ್ರೆ ಮಗಾ ಉಳ್ಕೋತಿತ್ತೊ ? ಇವತ್ತು ನಮ್ಮ ಇರೋ ಪುಟ್ಟಕ್ಕನು ನಾಳೆ ಏನಾಯ್ತದೆ ಅಂತ ಯಾಗೆ ಏನಾದು ? ಇನ್ನು ದೀಪಗಳು ನೋಡಿ... ನಮ್ಮೂರ್ ಯಾಗೆ ಇರೋದು ನಾಲ್ಕು ದೀಪಗಳು... ಅದ್ರಾಗೆ ಎಲ್ಲ ಯಾವಾಗಲೂ ಉರಿಯಾಕೆ ಇಲ್ರಿ..ಕತ್ತಲು.... ಇನ್ನೆಲ್ಲು ಬೀದಿ ದೀಪಗಳು ಅವೆ...ಅವು ಸದಾ ಕಣ್ಣು ಒಡೀತಿರ್ತವೆ. ಅದ್ನ ನೋಡಿ, ನೋಡಿ ನಮ್ಮ

ಐಕ್ಳು ಕಣ್ಣು ಒಡೆಯದಾದು ಕಲ್ತ್ಕೊಂಡವೆ.... ಏನಾ ಮುದಾಯಿದಾಗೆ ಸಿಕ್ಕೊಕ್ಳಾದು....ಹಿಗ ಬರೋದಿಗೆ ಕಣ್ಣು ಒಡೆಯೋದು... ಗಾಡುಗಳದ್ದೆ ಆಟ ತಪ್ಪಿಸ್ತ ಬುತ್ತಿ.... ನಿನ್ನ ಮೇಲೆ ನೋಡಿ ಗಾಡಿ ಬಂದ್ರೆ ಹೊಡಿತ್ರ.... ನಾಟಿದ್ದು ನಮ್ಮ ಮನೇಗ ಹಿಗ ನಮ್ಮ ಮುಂತ್ರೇಗೆ ಕಣ್ಣು ಒಡೀ ತೀರಾ.... ತಪ್ಪೆಲ್ಲ ಬೀಸಿದ್ದೂ ಯಾರಾ...ಬಿಡಿ ಇರಾದು ಉಪಾಯದಾಕಲ್ತ್ಕೊಂಡು....ಅವ ಇಲ್ಲ ಅಂದಾಗ ಕಷ್ಟನ ಅಯ್ತದೆ....ಪ್ರೋಲೀಸ್ ಕಂಪ್ಲೇಂಟ್ ಕೊಡಾವ ಅಂದ್ರೆ ನಮ್ಮೂರ್ನಾಗ ಒಂದು ಪೋಲೀಸ್ ಸ್ಟೇಷನ್ ಇಲ್ರ..ನಮ್ಮೂರ್ಗೊಂದು *police station*ಕೊಡ್ರಿ ಅಂತ ಬೆಂಗ್ಳೂರ್ಗೆ ಪತ್ರ್ದವ ಅರ್ಜಿ ಬರೆದು 4 ಚಪ್ಪಲಿ ಸವೆಸಿತ್ರ-ಈಗ ಈ ಚಪ್ಪಲಿ ಕೊಂಡ್ಕೊಂಡೀವ್ರಿ...

ಪಾದಯಾತ್ರಪ್ಪ : ನಿನ್ನ ಚಪ್ಪಲೀ ಕಥೆ ಬೇಕಿಲ್ಲ-ಕಾಣೆ ಆದುದು ಹೇಳು

ನೊಕ್ಕರು : ಬತ್ತೀನಿ ಇತಿಹಾಸ್ಕ.. ಇತ್ತೀಚೆ...ನೋಡಿ ನಕ್ಸಲ್ ಸಿಗಬಹುದ್ರಾ ಇರತ್ತದು-ಸಿಗದಿದ್ದರೂ ಇಲ್ಲದಿದ್ರಾ ಎಂಗೋನಮಾಡ್ಕೊಂಡಿದ್ದು....ನೀರೇ ಇಲ್ಲದಿದ್ರೆ ಗತಿಏನು? ಆಫೀಸ್ ಗೋಗೊಳು ಇರ್ತಾರೆ.... ಇಸ್ಕೂಲ್ ಗೋಗೋಳು ಇರ್ತಾರೆ..ಅವರಿಗೆಲ್ಲ ಆವಾಗವಾಗ ಮಾಡಾಕ್ ಬೇಕು, ಮಾಡಿಕೆಲ್ಲ ಮಾಡ್ತಾರೇಕು ...ಆಲ್ದೇ ಇದೊಂದು ಎಲ್ಲ ನಲ್ಲಿ....ಅಲ್ಲಿ ಸಿಸಾನ ಒಂದು ಹಿಂದಿಗೆ ತಂದು ಗಿದಾಗದ್ರ....ನಾನುಂಕಾಲಿದ ಮನೆಗೂ ಕೊಟ್ಟೆರಾ, ತೊಟ್ಟೆರಾ ಅಂತ ಕೇಳ್ಳಕ್ಕೆಹೋಗ್ರೆ ಹೀರು.... ಒಂದೊಂದಸ ನೀರು ಬರಾಕಿಲ್ಲ. ಇನಾದಾದೀನು ? ಎದುರ್ಗೆ ಇನ್ಸ್ಪೆಕ್ಟರು ನಲ್ಲಿ ಇದೆ...ಅಲ್ಲಾನ ಬರ ಬೈತ್ತಾರು ಅಂತ ಎಮ್ಮ ಅಲ್ಲಿ ಹೋದೆ ಅಂತ ಮಾಡಕ್ಸಿ .. ಅಲ್ಲಿ ನೀರು ಬರಾಕಿಲ್ಲ.ಎದುರ್ಗೆ ಕೊಡ ಇನ್ಸ್ಪೆಕ್ಟರು ನಲ್ಲಿಗೆ ನೀರು ಬರಾಕೆ ಶುರುವಾಯ್ತದೆ....ದುಡುದುಡು ಅಂತ

ಅಲ್ಲೀಗೆ ಓಡಿದ್ರು ಅನ್ನಿ....ಆಗ ಅಲ್ಲಿ ನೀರು ನಿಂತು ಇನ್ನೊಂದು ಸಲ್ಲೀಲಿ ನೀರು ಬರಾಕೆ ಶುರು ಆಯ್ತದೆ... ಇಂಗಾಗಿ ಇಲ್ಲಿಂದಿಲ್ಲೀ ಓಡಿ ಓಡಿ ನಮ್ಮೈಕ್ಳೀ ಎಣ್ಮಕ್ಕೆಲ್ಲ ರನ್ನಿಂಗ್ ರೇಸ್ ಕಲ್ತ್‌ಬಿಟ್ಟವ್ರೆ.... ಯಾವ್ಯಾವ ಒಲಿಂಪಿಕ್ಸ್ ಕಳಿಸ್ರಿ ಈಗ ಅವ್ರನ್ನ ಫಸ್ಟ್ ಬತ್ತಾರೆ....

ಪರಮೇಶ್ವರಪ್ಪ : ಛೆ....ಒಳ್ಳೆಪೀಡೆ ಆದ್ನೆ ?

ಮೇಸ್ಟ್ರು : ಪ್ರೋರಾಕೇಳ್ಕಳ್ಳಿ .... ಯಾವ್ಯಾವುದುಪೀಡೆ– ಯಾರುಪೀಡೆ ಅಂತ ಗೊತ್ತಾಯ್ತದೆ. ಸೊಮೆ, ಇಂತಾ ಪ್ರಟಾಣ ಗಳಿಗೆ ಅ–ಆ–ಇ–ಈ ತಿದ್ದಾಕೋದಲ್ಲ ಪುಣ್ಯ. ಇವ್ರೇ ತಾನೆ ನಮ್ಮ ನಾಳಿನ ಪ್ರಜೆಗಳು....ಏನು ಎಲ್ಲಾ ರೂಪೇ ಅಕ್ಷರಕ್ರಾಂತಿ, ಅಕ್ಷರಕ್ರಾಂತಿ ಅಂತ ಅಂದದ್ದೂ ಅಂದದ್ದೇ....ಮೈಕ್ ಸಿಕ್ಕರೆ ಸಾಕು ಘಂಟೆ ಗಟ್ಟಲೆ ಭಾಷಣಮಾಡಿದ್ದೂ ಮಾಡಿದ್ದೇ....ಆದ್ರೆ ಏನಾಗದೆ ಈಗ....ನಮ್ಮೈಕ್ಳ ಯಾಗ ನೋಡಿ ನಾಲ್ಕ್ನ ಇಸ್ಕೂಲು....ಆದ್ರಾಗೆ ಎಲ್ಡು ಇಸ್ಕೂಲು ಮರದ ಕೆಳಗೇ ನಡೀತದೆ ಇಂಗೆ....ಮಳೀ ಬಂದ್ರೆ ಇಸ್ಕೂಲಿಗೆ ರಜಾ..ಬಿಸಿಲು ಬತ್ತು ಇಸ್ಕೂಲಿಗೆ ರಜಾ....ಎಡ್ಮಾಸ್ಟರಿಗೆ ಉಸಾರಿಲ್ಲ ಇಸ್ಕೂಲಿಗೆ ರಜಾ....ಇನ್ನ ಪಾಠ ಆಗಾದು ಎಂಗೆ ?

ಇನ್ನೊಂದು ಇಸ್ಕೂಲ್ ಆದೆ....ಆವಪ್ನ ಇಲ್ಲಿಂದ– ಆಲ್ಲೀವರೆಗೂ ಭಾರಿ ಜೋರ್ದ್ ಆಕೌನ್ನೆ....ಸರಕಾರದೋರು ಸಾವಿರಾರು ರೂಪಾಯಿ ಗ್ರಾಂಟೂ ಕೊಡ್ತಾರೆ....ಆಲ್ಲಿ ಉಡುಗ್ರೂ ಇಲ್ಲ–ಮೇಸ್ಟ್ರೂ ಇಲ್ಲ....ಆ ಎಪ್ನ ಮಾತ್ರ ಗ್ರಾಂಟು ತಿಂದೂ ತಿಂದೂ ಒಳ್ಳೆ ಎಗ್ಣ ಆದಂಗೆ ಆಗೌನ್ನೆ....

ಪರಮೇಶ್ವರಪ್ಪ : ಹಾ....ಸಾಕು....

ಮೇಸ್ಟರು : ಅರೆ! ನಮ್ಮ ಸ್ಕೂಲು ಕಥೆ ಕೇಳ್ಕಳ್ಳಿ....ನಮ್ಮ ಸ್ಕೂಲ್ ನಾಗೂ 30–40 ಹುಡುಗರು ಇದ್ರೆ....ಪಾಠ ಮಾಡೋವಾಗ ನಾನು–ಹುಡುಗ್ರು ಎಲ್ಲಾ ಆ ತಾರಸಿ ಕಡೇನೇ ನೋಡ್ತಿರ್ತೀವಿ....ಯಾಕೆ ಅಂದ್ರೆ ಯಾವಾಗ ಅದು ಧೊಬಕ್ ಅಂತ ಬೀಳ್ತದೆ ಅಂತ ಏಳಾಕಾಗಾದಿಲ್ಲ....

ಪ್ಯಾಪರಾಗೆ ನೋಡಾಕಿಲ್ವ ದಿನಬೇಗಾದರೆ....ತಾರಸಿ ಬಿದ್ದು 32 ಮಕ್ಕಳ ಮರಣ. ಆಗ ನಮಗೇನೂ ಅನ್ನಾಕೆ ಇಲ್ಲ.....ಯಾಕೆ? ಅಲ್ಲಿ ನಮ್ಮ ಮಕ್ಳು ಕುಂತಿರಲಿಲ್ವಲ್ಲ. ಅದೇ ಒಬ್ಬ ಆಫೀಸರ್ ಮಗನೋ ಮಂತ್ರೀ ಮಗನೋ ಕುಂತಿದ್ರೆ ತಕ್ಷಣ ಒಂದು ತನಿಖಾ ಆಯೋಗ ....ಈ ಬಿಲ್ಡಿಂಗ್ ಪ್ಲಾನ್ ಆಕ್ಕೊಟ್ಟೋರು ಯಾರು? ಬಿಲ್ಡಿಂಗ್ ಕಟ್ಟಿದೋರು ಯಾರು? ಸುಣ್ಣ ಒಡ್ಡೋರು ಯಾರು? ಬಣ್ಣ ಒಡ್ಡೋರು ಯಾರು ಅಂತ ಕಂಡಿದ್ದು–ಸುಣ್ಣ ಒಡದೋನ್ನ ನೇಣಕ್ತಿ–ಕಂಟ್ರಾಕ್ಟರ್ನ ಬಿಟ್ ಬಿಡ್ತಾರೆ....ಇಂಗಾದ್ರೆ ಎಂಗೆ?

ಪರಮೇಶ್ವರಪ್ಪ : ಆಯಿತು...ಅದಕ್ಕೆ ಈಗ ನಾನೇನು ಮಾಡಬೇಕು?

ಮೇಸ್ಟರು : ಓಹೋ....ಕೇಳ್ರಪ್ಪೋ....ಏನು ಮಾಡಬೇಕು ಅಂತ ನನ್ನ ಕೇಳಿದ್ರೆ ಎಂಗೆ? ಆಯಿತು....ನೀವು ಏನು ಮಾಡಬೇಕು....ಅದು ಯಾರೋ ಮನುಷ ಬಂದಿದ್ನಲ್ಲ ಅವನು (ಅತ್ತ - ಇತ್ತ-ನೋಡಿ ಅವನಂತೆ act ಮಾಡುತ್ತ) ಅದಕ್ಯಾಕೆ ಯೋಚನೆ ಮಾಡ್ತೀರಿ-ನೀವು *rest* ತಗೋಳಿ ಹೋಗಿ. ನಾನು ಒಂದಲ್ಲ-ಎರಡಲ್ಲ-ಮೂರಲ್ಲ, ನಾಲ್ಕು ದೇವಸ್ಥಾನ ಕಟ್ಟಿಸ್ತೀನಿ-*ok*-ಅಂದ್ನಲ್ಲ ಅವನಿಗೆ ಹೇಳಿ ಭದ್ರವಾಗಿ ನಾಲ್ಕು ಗೋಡೆ ಆಕಿ–ಗಟ್ಟಿ ತಾರಸಿ ಆಕಿಸ್

ಕೊಡಾಕೆ ಏಳಿ, ಇನ್ನೊಂದು ಇಸ್ಕೂಲ್‌ಗೆ ಸುಣ್ಣ–ಬಣ್ಣ ಹೊಡಾಕೆ ಸಹಾಯಕೊಡಲಿ. ಬೆಳಗಿಂದ–ಸಾಯಂಕಾಲದವರೆಗೆ ಮಕ್ಕಳಿಗೆ ಪಾಠಮಾಡಿ ಆವರನ್ನು ಇವ್ರಾ ಸಂತರಪ್ಪ ಮಾಡದೆ ಹೋದ್ರೆ ನನ್ನ ಎಸರು ಮೇಸ್ಟ್ರೇ ಅಲ್ಲ–

ಪರಮೇಶ್ವರಪ್ಪ : (ಗದರಿ) ಅಹೊತ್ತಿಂದ ಇಷ್ಟೊತ್ತು ಮಾತಾಡ್ತಾ ಇದೀರಲ್ಲ–ಏನೆ ಹೋಗಿ ಕೇಳಿ ಅಪ್ಪ-

ಮೇಸ್ಟ್ರು : ಅಯ್ಯೋ....ನನ್ನ ಮಾತು ಯಾರು ಕೇಳ್ತಾರೆ ಸ್ವಾಮಿ, ನಾನು ಅಲ್ಲಿಂದ ಮೇಸ್ಟ್ರು ಬಂದೀನಿ ಅಂತ ಚೀಟಿ ಕಳಿಸಿದರೆ, ಚೀಟಿ ಅಂಡು ಕೈಗೆ ಇಟ್ಕೊಂಡು ಕುಂತ್ಕೊಂತಾರೆ ..ಮನೇತಾಕೆ ಬಂದು ಗಲಾಟೆಮಾಡಿ ಕೂಗಾಡ್ತೀನಿ ಅಂದ್ರೆ ನಾಯಿ 'ಛೂ' ಬಿಡ್ತಾರೆ ಅಷ್ಟೇನಾ.... ನೀವು ಅಂದ್ರೆ ದೊಡ್ಡ ಮನುಷ್ಯರು ನೀವು ಫೋನ್ ಹಚ್ಚಿದ್ರೆ ಕೆಲಸ ಆಯ್ತದೆ, ಫೋನ್ ಮಾಡಿದ್ರೆ ಕೆಲಸ ಆಯ್ತದೆ. ನೀವು ಬರ್ತೀರಿ ಅಂತ ಗೊತ್ತಾದ್ರೆ ಮಣ್ಣು ರಸ್ತೆ-ಟಾರ್ ರಸ್ತೆ ಆಯ್ತದೆ, ಟಾರ್ ರಸ್ತೆ ಸಿಮೆಂಟ್ ರಸ್ತೆ ಆಯ್ತದೆ, ಊರುಜನರೆಲ್ಲಾ ಸೇರಿ ಸಾಮೂಹಿಕ ಆರತಿ, ನಿಮಗೆ ಸನ್ಮಾನಾ ಮಾಡಿ, ಎಲ್ರು ಕೈಗೆ ಎಲ್ಲಾ ಗಮನಾ ಕೊಡ್ತಾರೆ ಬೇಕಾದ್ದು..

ಪರಮೇಶ್ವರಪ್ಪ : ಆದೆಲ್ಲ ನಂಗೆ ಬೇಕಾಗಿಲ್ಲ....ಕಾಣಿಕೆ ಎಷ್ಟು ತಂದಿದೀರಿ ದೇವಸ್ಥಾನಕ್ಕೆ ಅದು ಹೇಳ್ರಿ.

ಮೇಸ್ಟ್ರು : ಸ್ವಾಮಿ....ಒಂದು ಹಳ್ಳಿಗೆ–ಶಾಲೆಯೇ ಬೇಕು. ದೇವಸ್ಥಾನ..ಮನೆ ಅಂತ ಬಂದಿದ್ರೆ ದೇವರ ಸನ್ನಿಧಿ ಇದ್ದಂಗೆ.... ಯೋಚ್ನೆ ಮಾಡಿ ಕೇಳ್ರಿ......ಜನಸೇವೆಯೇ ಜನಾರ್ಧನಸೇವೆ...ಎಲ್ಲಕ್ಕೂ ಮುಖ್ಯವಾಗಿ ಮನುಷ್ಯ

ನಿಗೆ ಬೇಕಾದ್ದು ಉದ್ಯೋಗ–ವಸತಿ–ಎಲ್ಡು ಹೊತ್ತು ಊಟ....ಆಮೇಲೆ ಅಲ್ಲವ್ರಾ ಮಿಕ್ಕದ್ದು.

ಪರಮೇಶ್ವರಪ್ಪ : ಸರಿ... ಮತ್ತೆ ಶುರುಮಾಡಿದ್ರಲ್ಲ ನಿಮ್ಮ ಹರಿಕಥೆ?

ಮೇಸ್ಟ್ರು : ನೋಡಿದ್ರಾ ಸ್ವಾಮಿ... ಊರಿಗೊಂದು ಆಸ್ಪತ್ರೆ ಬೇಕು ಅಂದ್ರೆ ಅದು ಅರಿಕಥೆ, ನಿಮ್ಮ ಬೀದಿ ದೀಪ ಸದಾ ಉರೀ ಬೇಕು ಅಂದ್ರೆ ಅದು ಅರಿಕಥೆ, ಓದ್ದೋರಿಗೆಲ್ಲ ಕೆಲ್ಸ ಬೇಕು ಅಂದ್ರೆ ಅದು ಅರಿಕಥೆ, ನ್ಯಾಯವಾದ ಬೆಲೆಗೆ ದಿನಸಿಸಾಲು ಸಿಗಬೇಕು ಅಂದ್ರೆ ಅದು ಅರಿಕಥೆ, ಈ ಎಲ್ಲಾ ಜನ ಆರಾಮಾಗಿರ್ಲೀ ಅಂತ ದಿನಬೇಡಿ ಅಂದ್ರೆ ಅರಿಕಥೆ, ಕಡ್ಡಾಯವಾಗಿ ನಿಮ್ಮಕೈಲಿ ಕಾಸಾಕಿ ಸ್ವೊಂತ ತನ್ನ ಎಸ್ಟೇಟ್ನಾಗೆ ದೇವಸ್ಥಾನ ಕಟ್ಟಿಸಾಕೆ ಒಂಟವ್ನಲ್ಲ ಇದು ಅರಿಕಥೆ ಅಲ್ರ....

ಪರಮೇಶ್ವರಪ್ಪ : ತಲೆ ಎಲ್ಲ ಹಾಳಾದ್ದ್ರಾನಿವನು... ಅಟ್ರೋ ಆಚೆ ಇವನ್ನ...

ಶಿಷ್ಯ 1 : (ಹತ್ತಿರ ಬಂದು) ಏಯ್....ನಡಿಯಯ್ಯ.....

ಮೇಸ್ಟ್ರು : ನಾ ಓಗೋದಿಲ್ಲ ಅಂದ್ರೆ ಓಗೋದಿಲ್ಲ....

ಪರಮೇಶ್ವರಪ್ಪ : ಪೋಲೀಸ್ ನವರನ್ನ ಕರೀತೀನಿ ನೋಡು

ಮೇಸ್ಟ್ರು : ಅರೆ ಕಮಿಷನರ್ ನೇ ಕರೀರಿ...ನಾನೇನು ತಪ್ಪು ಹೇಳ್ತಿ ದೀನಾ... ಒತ್ತಾಯವಾಗಿ ದೇವಸ್ಥಾನಕ್ಕೆ ಕಾಸು ಕಿತ್ಕೋ ಅಂತ ಏಳವ್ರಾ ಅವರು.

ಪರಮೇಶ್ವರಪ್ಪ : ಬೇಡಾ... ನಿನ್ನ ಕೆಲಸದಿಂದ ಓಡಿಸ್ ಬಿಡ್ತೀನಿ ನೋಡು

ಮೇಸ್ಟ್ರು : ಅರೆ!! ಹೇಳ್ರೀ.... ನೋಡಮ. ನಿಮ್ಮ ಒಕ್ಕೇನ್ನ ಹೇಳಾಕೆ ಹೋಗಿ ನನ್ನ ಕೆಲಸ ಹೋಯ್ತು ಅಂದ್ರೆ ಈ ಜನ ನನ್ನ ಸಾಕ್ತಾರ್ರೀ ಬೇಕಾರೆ.

ಪರಮೇಶ್ವರಪ್ಪ : ಕಳಿಸಯ್ಯ ಈ ಪೀಡೇನ.

ಮೇಸ್ಟ್ರು : ಯಾವ್ದೋನ್ರೀ ಪೀಡೆ... ಯಾರು ನಿಜವಾಗ್ಲೂ ಪೀಡೆ ಅಂತ ಈಗ ಜನಕ್ಕೆ ಗೊತ್ತದೆ.

ಶಿಷ್ಯ2 : ಹೊಯ್....ಹೋಗ್ತಿಯೋ ಕತ್ತು ಹಿಡಿದು ದಬ್ಬಲೋ.
(ಹತ್ತಿರ ಬಂದಾಗ ಹಾರಾಟ-ಗಲಭೆ)

ಮೇಷ್ಟ್ರು : ನನ್ನ ಮಾತ್ ಗಿಟ್ಟೋಯಾ....ನಾನು ಓಗಾದಿಲ್ಲ ಅಂದ್ರೆ ಹೋಗೋದಿಲ್ಲ, ಅದೇನುಮಾಡ್ತಿಯೋ ಮಾಡು
(ಎದು ಕೂರುವ)

ಶಿಷ್ಯ1 : ಸಾರ್....ಅಲ್ಲಿ ನೋಡಿಸಾರ್ *Press*ನವರು ಬಂದಿದಾರೆ.

ಪರಮೇಶ್ವರಪ್ಪ : (Pressನವರನ್ನ) ಏನ್ರೀ.. *Reporting*ಗೆ ಬಂದ್ರೋ ?

ಪ್ರೆಸ್ : (ಬಂದು) ಇಲ್ಲ....ಜನ ಏನೋ ತುಂಬ್ಕೊಂಡಿದ್ರಲ್ಲ ಏನು ಇದ್ದೀತು ವಿಷಯ ಅಂತ ನೋಡೋಕೆ ಬಂದೆ.

ಪರಮೇಶ್ವರಪ್ಪ : ನೋಡಿದ್ರೋ....ಒಂದು ಒಳ್ಳೆ ಕಾರ್ಯಕ್ಕೆ ಮಳೆ ಬಿಸಿಲು ಲೆಕ್ಕಿಸದೆ ಎಷ್ಟು ಅಲೆದಾಡಬೇಕಾಗುತ್ತೆ.... ಎಷ್ಟು ಪರದಾಡಬೇಕಾಗುತ್ತೆ.

ಗುಂಪಿನಿಂದ : ಹಹಹ. ಒಳ್ಳೆ ಕಾರ್ಯವಂತೆ....ಕಳ್ಳರಸಂತೆ

ಶಿಷ್ಯ1 : (ಅತ್ತನುಗ್ಗಿ) ಸುಮ್ಮನಿರ್ರೋಲೇ .. ಮಾತಾಡ್ಬೆ

ಪ್ರೆಸ್‌ನವ : *Excuse me!*....ನಾನು ಹೀಗಂತೀನಿ ಅಂತ ತಾವು ತಪ್ಪು ತಿಳ್ಕೋಬೇಡಿ....ನನಗೆ ಅನ್ನಿಸುತ್ತೆ ನಿಮ್ಮಂಥ ಪ್ರಭಾವೀ ವ್ಯಕ್ತಿಗಳು ಇವಕ್ಕಿಂತಾ ಒಳ್ಳೇ ಕೆಲಸ ಮಾಡಬಹುದು ಅಂತ.

ಪರಮೇಶ್ವರಪ್ಪ : ಏನ್ರೀ....ಹಾಗಂತೀರಿ ?

ಪ್ರೆಸ್‌ನವ : ನೋಡಿ....ನೀವೇ ಯೋಚನೆಮಾಡಿ ಅದ್ಯಾರೋ ಮೇಷ್ಟ್ರು ಹೇಳ್ತಿದ್ರು ಅವರ ಹಳ್ಳೀಲಿ-ಆಸ್ಪತ್ರೆ ಇಲ್ಲ-ದೀಪವಿಲ್ಲ-ನಲ್ಲೀಲಿ ನೀರಿಲ್ಲ-ಶಾಲೆ ಇಲ್ಲ ಅಂತ.

ಪರಮೇಶ್ವರಪ್ಪ : ಹೌದು ಅಂದ್ರಾ....ಅದಕ್ಕೆ ನಾನೇನು ಮಾಡ್ಲಿ ?

ಪ್ರೆಸ್‌ನವ : ನೀವು ದೊಡ್ಡ ಮನಸ್ಸು ಮಾಡಿದ್ರೆ *School* ಕಟ್ಟಿಸೋದು ಏನುಕಷ್ಟ ? ಅನಕ್ಷರಸ್ಥರನ್ನ-ಅಕ್ಷರಸ್ಥರ

ನ್ನಾಗಿ ಮಾಡೋಕಿಂತಾ ಧರ್ಮಕಾರ್ಯ ಬೇಕೆ? ಬಡವರಿಗೆ ಅನ್ನದಾನಮಾಡಬಹುದು, ಬಟ್ಟೆ ಹೊಲಿಸಿ ಕೊಡಬಹುದು, ನ್ಯಾಯವಾದ ಬೆಲೆಗೆ ಸಾಮಗ್ರಿಗಳು ಸಿಗೋ ಹಾಗೆ ಮಾಡಬಹುದು, ದೇಶದ ಆರ್ಥಿಕ ಪರಿಸ್ಥಿತಿಯೇ ಏರುಪೇರಾಗಿ ಕೂತಿರೋವಾಗ ನಿಮ್ಮ ಶ್ರಮ, ಅನುಭವ, ಪ್ರಭಾವ ಎಲ್ಲ ದೇವಸ್ಥಾನದ *Collection* ಗೆ ಒತ್ತಾಯದ ಆದ್ರೆ ಏನು ಪ್ರಯೋಜನ ?

ಪರಮೇಶ್ವರಪ್ಪ : ಬಡಜನತೆ, ಕಷ್ಟ, ನಿರುದ್ಯೋಗ, ಕೆಲಸ, ಹಾಹಾಕಾರ

ಶಿಷ್ಯ 1 : (ತಕ್ಷಣ) ಇವೆಲ್ಲ ಭಾಷಣದಲ್ಲಿ ಮಾತಾಡಕ್ಕೆ ಚೆನ್ನ.

ಶಿಷ್ಯ 2 : ಅಂತಾ ರೆಕಾರ್ಡ್ ಹಾಕುತ್ಲೇ ಬಂದಿದಾರಲ್ಲ ನಮ್ಮ ಸಾಹುಕಾರರು

ಪರಮೇಶ್ವರಪ್ಪ : ನನ್ನಶಿಕ್ಷ್ಣ ಹ್ಯಾಗೇ ಅಂದ್ರೆ

ಶಿಷ್ಯ 1 : (ತಕ್ಷಣ) ದೇವಸ್ಥಾನ ಕಟ್ಟಿಸೋದ್ರಿಂದ

ಶಿಷ್ಯ 2 : ನಮ್ಮ ಸಾಹುಕಾರರ ಹೆಸರು ಆ ದೇವಸ್ಥಾನದಲ್ಲಿ ತಲ ತಲಾಂತರಕ್ಕೂ ಉಳಿದಿರತ್ತಲ್ಲಾ ಅಂತ.

ಪ್ರೆಸ್‌ನವ : ದೇವರ ಕೆಲಸ ಮಾಡ್ತೀನಿ ಅನ್ನೋರಿಗೆ ಹೆಸರಿನ ಹುಚ್ಚು ಇರಬಾರದು.

ಪರಮೇಶ್ವರಪ್ಪ : (ರೇಗಿ) ಏನಂದೆ ?

ಶಿಷ್ಯ 1 : (ದೂರ ಕರೆದು) ಅವೆಲ್ಲ ಚರ್ಚೆಯಾಕೆ ? ಕಾಣಿಕೆ ಎಷ್ಟು ಕೊಡ್ತಾರೆ ಕೇಳಿಸಾರ್.

ಶಿಷ್ಯ 2 : *Press photographer* ಬಂದಿದಾರಾ ಕೇಳಿ ಸಾರ್.

ಪರಮೇಶ್ವರಪ್ಪ : ಲೇ....ಅವರು *Perss*ನವರು ಕಣೋ..ಹಣಕೊಡದೆ ಹೋದರೂ ಚಿಂತೆಯಿಲ್ಲ..*Report* ಮಾಡ್ಲಿ ಸಾಕು.. ಏನ್ರೀ ..."ದೇವಸ್ಥಾನದ ಕಾರ್ಯಕ್ಕಾಗಿ ದಾನ

"ಯಾತ್ರೆ" ಅಂತ ದಪ್ಪ ಅಕ್ಷರದಲ್ಲಿ ಹಾಕಿ.

ಶಿಷ್ಯ1 : *front page*ಲ್ಲೇ ಹಾಕ್ರೀ

ಶಿಷ್ಯ2 : ನಮ್ಮಿಬ್ಬರ ಹೆಸರೂ ಸೇರಿಸ್ರಿ....

(ಪ್ರೆಸ್‌ನವ ಇಬ್ಬರನ್ನೂ ದುರು ದುರು ನೋಡುವ)

ಶಿಷ್ಯ1 : ಸಾರ್ ...... (ಪರಮೇಶ್ವರಪ್ಪನ ಬಳಿ ಹೋಗಿ) ಸಾರ್ ! ಹೊಸಾ *car* ಪಕ್ಕದಲ್ಲಿ ನಿಂತ್ಕೊಂಡು ಒಂದು*photo* ತೆಗೆಸಿ ಹಾಕಿದ್ರೆ ಹೇಗೇಸಾರ್.

ಪರಮೇಶ್ವರಪ್ಪ : (ವ್ಯಂಗ್ಯವಾಗಿ) *photo...car* ಪಕ್ಕದಲ್ಲಿ

ಶಿಷ್ಯ1 : ಹೂಂ....ಸಾರ್

ಪರಮೇಶ್ವರಪ್ಪ : ಅಲ್ರೀ....ಗಾಂಧೀವಾದಿ ಅಂತ ಹೊರಟು *car* ಪಕ್ಕದಲ್ಲಿ ನಿಂತ್ಕೊಂಡು *Photo* ತೆಗೆಸಿದ್ರೆ ಉಗಿಯೊಲ್ವೇ ಜನ.

ಶಿಷ್ಯ1 : *Sorry sir*

ಶಿಷ್ಯ2 : ಸಾರ್.... ...ದೂರದಲ್ಲಿ *car* ಕಾಣಿಸೋ ಹಾಗೆ ನಿಂತ್ಕೊಂಡು *photo* ತೆಗೆಸಿಕೊಂಡ್ರೆ.

ಪರಮೇಶ್ವರಪ್ಪ : ಕತ್ತೆಗಳು... *Commonsense* ಇಲ್ಲ....ಮಾತಾಡಿ ಬಿಡೋದು....

ಶಿಷ್ಯ1 : ಹೇಳಿಬಿಡಿಸಾರ್ *Press*ನವರಿಗೆ–ನಮ್ಮ *News Front page*ಲ್ಲಿ ದೊಡ್ಡದಾಗಿ ಹಾಕು ಅಂತ.

ಪರಮೇಶ್ವರಪ್ಪ : ಹೇಳೋದೇನು ಬಂತೂ...ಅವರಿಗೆ ಗೊತ್ತು ಎಲ್ಲ.... ಏನ್ರೀ *Mr.* ನಾಳೆ ನನ್ನದೊಂದು ದೊಡ್ಡ *photo* ಹಾಕಿ, *Front page*ಲ್ಲಿ ದಪ್ಪಕ್ಷರದಲ್ಲಿ ಬರೀರಿ–

ಪ್ರೆಸ್‌ನವ : ನೋಡೋಣ....

ಪರಮೇಶ್ವರಪ್ಪ : ಏನ್ರೀ ಅದು ನೋಡೋಣ ಅಂತೀರಿ.... *Phone* ಮಾಡಬೇಕಾ ನಿಮ್ಮ *Management*ಗೆ.... ಕೆಲ್ಸದಲ್ಲಿ ಇರಕ್ಕೆ ಇಷ್ಟ ಇದೆತಾನೆ ?

ಪ್ರೆಸ್‌ನವ : ಏನು ? *Phone*ಮಾಡಿ ಕೆಲಸದಿಂದ ಓಡಿಸ್ತೀನಿ

ಅಂತೀರಾ...ನಾನು ಏನು ಅಂತ ನಮ್ಮ ಮ್ಯಾನೇಜ್ ಮೆಂಟ್‌ಗೆ ಗೊತ್ತು....ಮಾಡ್ಕೊಳ್ರೀ *Phone*..... ನಿಮ್ಮಂತೋರು ಎಷ್ಟೋ ಜನಾ – ಇವರು ವಾಕ್ ಸ್ವಾತಂತ್ರ್ಯ ಪ್ರಜಾಪ್ರಭುತ್ವ–ಪತ್ರಿಕಾ ಸ್ವರ್ಗ ಅಂತ ಲೆಕ್ಚರ್ ಕೊಡೋರು....ಅಯ್ಯೋ ಭಾರತಾಂಬೆ....
(ಬಿರುಸಾಗಿ ಹೊರಟು ಬಿಡುವ)

ಪರಮೇಶ್ವರಪ್ಪ : ಓ...ಶಾಸಕರವರಿಗೆ ಎಷ್ಟು ಹೊಗರು? ...ಇರಲಿ ಇವನ ಕೊಬ್ಬು ಇಳಿಸ್ತೀನಿ....(ಕೈಮುಗಿದು) ಮಹನೀಯರೆ, ಮಹಿಳೆಯರೆ, ದೇವರ ಕೆಲಸಕ್ಕೆ ನಿಮ್ಮ ಕಾಣಿಕೆ ನೀಡಿ, ಇಲ್ಲವಾದರೆ ಅನವಶ್ಯಕ ತಂಟೆ–ತಕರಾರು– ಹಿಂಸೆ......ದೇವರ ಕಾಣಿಕೆ ಉದಾರವಾಗಿರಲಿ– ಈ ವಿಷಯಕ್ಕೆ ಜುಗ್ಗರಾಗಬೇಡಿ....ಜನಾರ್ಧನ ಸೇವೆಯೇ ಜನಸೇವೆ

ಗುಂಪಿನಿಂದ : ಛೀ ...ತಿರುಗಾ ಮುರುಗಾ ಮಾಡಿಬಿಟ್ಟ.

ಪರಮೇಶ್ವರಪ್ಪ : ಹೌದು! ಜಗತ್ತೇ ಇಂದು ತಿರುಗಾ–ಮುರುಗಾ ಆಗಿದೆ ಮತ್ತೆ ಅದನ್ನು ಸರಿಮಾಡಬೇಕು ಅಂತ್ಲೇ ನನ್ನ ಇಷ್ಟ... ಅದಕ್ಕಾಗೆ ನನ್ನ ದುಡಿಮೆ, *Influence*ನ-ಎಲ್ಲ.

ಎಂದು ತಮ್ಮ ವಿನಮ್ರ ಸೇವಕ
ಪರಮೇಶ್ವರಪ್ಪ

(ಎಂದು ಹೊರಡುವಾಗ-ಹಾಡು ಕೇಳುತ್ತದೆ "ಬಂದರೋ ಅಭ್ಯಾಗತರು" ಹಾಡು ಮುಗಿದಾಗ Freeze ಆಗಿ ನಿಲ್ಲುವ. ತಕ್ಷಣ ಮೇಷ್ಟರು ಎದ್ದು)

ಮೇಷ್ಟರು : ಇದು ಇಲ್ಲಿಗೆ ಮುಗೀತು ಅಂತಲ್ಲ ....ಇದು ಮುಗಿಯೋದು ನನ್ನಂಥಾ. ನಿಮ್ಮಂಥಾ ಬಡವರು ತಿರುಗಿಬಿದ್ದಾಗ ಮಾತ್ರ....ಬಡತನಾನ ದೂರಮಾಡಿ ಅಂದ್ರೆ ಬಡವರನ್ನೇ ದೂರಮಾಡೋ ಇಂಥವರೇ ನಿಮಗೆ ಪ್ರಿಯವೇನು ? ನಿಮಗೆ ದೇವರಲ್ಲಿ ಇರ

ಬಹುದಾದ ನಂಬಿಕೆಯನ್ನ ನಾನಾ ಅರ್ಥದಲ್ಲಿ ಬಳಸಿ ಶೋಷಣೆಮಾಡುವ ಇಂಥವರ ನಿಜವಾದ ಬಣ್ಣ ನೀವು ತಿಳಿಯೋದು ಯಾವಾಗ? ನಾವು ಬಡವರಿ ಬಹುದು–ನಮ್ಮ ಹೊಟ್ಟೆ ಗಳಿಸುವುದು–ಅಷ್ಟೆ ನಾವು ಬಗ್ಗೆಯೋಚ್ನೆ ಮಾಡ್ತೀನಿ....ನಮ್ಮಿಂದ–ನಿಮ್ಮಿಂದ ಅಂಥಾ ಕಟ್ಟಿ ಆಲೋಚನೆಗಳನ್ನ–ಯೋಜನೆಗಳನ್ನ ಹಾಕೋದು ಸಾಧ್ಯವೇ ಇಲ್ಲ. ತನ್ನ ಸ್ವಂತ ಅಣದಾಗೆ ನಾಲ್ಕು ದೇವಸ್ಥಾನ ಕಟ್ಟಿಸ್ಲಿ ಬೇಕಾದ್ರೆ–ಅಷ್ಟೆ ಅದುಬಿಟ್ಟು ತನ್ನ ಅಧಿಕಾರ–ಅಂತಸ್ತು ಬಳಸ್ಕೊಂಡು ಜನರನ್ನ ಸುಲಿಗೆ ಮಾಡಿ ಇನ್ನೊಂದು ದೇವಸ್ಥಾನ ಕಟ್ಟಿಸೋ ಆಸೆ....

ಇವನಿಗೆ ಯಾವ ದೇವ್ರು ಬೇಕಿಲ್ರ–ತನ್ನ ಎಸ್ರು ಉಳಿಯೋ ಅಂಥ ಪರ್ಮನೆಂಟ್ ದೇವಸ್ಥಾನ. ನಿಜವಾದ ಭಕ್ತ ತನ್ನ ಒಳಗೇ ಒಂದನ್ನ ಕಟ್ತಾನೆ... ಇಷ್ಟೇ ಕೊಡಬೇಕು ಅಂತ ಒತ್ತಾಯಮಾಡಾಕೆ ಇವನ್ಯಾರು? ಅಂಗೆ ಒತ್ತಾಯಮಾಡಿದಾಗ ಇಂಗೆ ಕೇಳಾದು ತಪ್ಪು ಅಂತ ನೀವು ಯಾಕೆ ಪ್ರತಿಭಟನೆ ಮಾಡಲ್ಲ? ಮನೆಯಾಗೆ ಒಂದು ಒತ್ತಿಗೆ ಊಟಕ್ಕಿಲ್ಲದೆ ಓದ್ರೂ-ಎಂತ್ರಿ ಬಾಯಿ ಬಡಿದು ಇವನ ದೇವಸ್ಥಾನಕ್ಕೆ ಕಂತು ಕಟ್ತಾನೆ ಗುಮಾಸ್ತ? ಯಾಕೆ? ಪ್ರೀತೀನಾ-ಅಲ್ಲ; ಭಕ್ತೀನಾ-ಅಲ್ಲ–ಮತ್ತೆ? ಭಯ....ಕೆಲಸ ಉಳಿಸ್ಕೊಳ್ಳೋಕ್ಕೆ ಕಂತು....ಯಾವಾಗ್ಲಾರೂ ದೇವರು 100ರೂ ಕೊಟ್ರೆ ಬಾ–ಇಲ್ಲಾಂದ್ರೆ ಬರಬೇಡಾ ಅಂತ ಅಂದಿದಾನೇನ್ರಿ?......10ರೂ ಕೊಟ್ರೂ ಸರಿ, 10 ಪೈಸೆ ಕೊಟ್ರೂ ಸರಿ–ತುಳಸೀದಳ ಇಟ್ಟು ಪೂಜೆಮಾಡಿದ್ರೂ ಬೇಡಾ ಅನ್ನಲ್ಲ ಅಪ್ಪ... ರೂಪಾಯಿ ಕೊಡೋಕೆ ಬದಲು ಪೈಸಾ ಕೊಟ್ಟಿದಿ...

soyou have been dismissed ಅಂತ ಬರೆದ್ರೆ ಸಾಕು *Memo* ಕೊಟ್ಟಿದ್ದಾರಾ ನೋಡ್ತಾ ನನ್ನ ಹೀಗಿರೋವಾಗ ಕುರಿಗಳ ಹಾಗೆ ಹೇಳಿದ್ದಕ್ಕೆಲ್ಲ "ಹುಂ" ಅಂತಿದ್ರೆ-ಇಂಥವರು ಎತ್ತರೆತ್ತರಕ್ಕೆ ಬೆಳೀತಾನೆ ಇರ್ತಾರೆ ಅಂತಸ್ತುಗಳು ಏರತಿರತ್ವೆ-ಗುಡಿಸಲುಗಳು ನಿರ್ನಾಮ ವಾಗತಿರತ್ವೆ....ಅದಕ್ಕೆ ನಾನು ಮಾಡಿದ್ದು ಸರಿಯೋ ತಪ್ಪೋ ಅಂತ ಪಕ್ಕದವನ್ನ ಕೇಳಬೇಡಿ....ಯಾಕಂಗೆ ಯಾವಾಗ ರೆಕ್ಕೆ ಬಂದು ಎಲ್ಲಿ ಹಾರ್ತಾರೆ ಅಂತ ಗೊತ್ತಾಗೊಲ್ಲ. ಆದುದರಿಂದ ನಿಮ್ಮ ಮನಸ್ಸನ್ನ ನೀವೇ ಕೇಳ್ಕೊಳ್ಳಿ....ನಿಮ್ಮ ಆತ್ಮಕ್ಕೆ ಉತ್ತರ ನೀವೆ ಹೇಳಿಕೊಳ್ಳಿ.

(ಮೇಸ್ಟ್ರು ಅಚಲವಾಗಿ ನಿಲ್ಲುವ. ತಕ್ಷಣ ಪರದೇಶ್ವರಪ್ಪನ ಶಿಷ್ಯರಲ್ಲಿ ಒಬ್ಬ ಮೇಸ್ಟರ ಬಳಿಬಂದು)

ಶಿಷ್ಯ1 : ನಿಜ...ಈವರೆಗೆ ನಾನು ನಡೆದು ಬಂದ ದಾರಿ ಸರಿ ಇಲ್ಲ....ಇಂಥ ಅನ್ಯಾಯ. ಅಕ್ರಮಗಳಲ್ಲಿ ನನ್ನ ಭಾಗಿಯಾಗಕ್ಕೆ ಇಷ್ಟವಿಲ್ಲ...ಆ ಕೋಟೆಯಿಂದ ಈಚೆ ಬಂದು ಹೇಳ್ತಾ ಇದೀನಿ....ಅದು ಮೋಸ, ದಗಲು ದರೋಡೆ...ಮೇಸ್ಟ್ರು ಹೇಳಿದ್ದು ಬಹಳ ಸರಿ.... ನಾವೆಲ್ಲ ಇಂಥವರ ವರ್ತನೆಗೆ ಪ್ರತಿಭಟಿಸಬೇಕು

ಮೇಸ್ಟ್ರು : (ಜೋರಾಗಿ) ಅಂದ್ರೆ....ಇದುವರೆಗೆ ಆದದ್ದು ಆಯ್ತು—ಮುಂದೆ ಆಲೋಚನಾ ಭಾವಿ ಜೀವನದ ಹಾದಿ ಹಿಡಿದ್ದಿದ್ದಾಗೆ ನಡೆ....ಆದರೆ ಒಂದೊಂದು—ನೀನಾಗ ಬಂದೆಯೋ ಅಥವಾ ನಿನ್ನ ಹಣ ನೋಡಿಕೊಂಡೆ ಅಂತ ತಿಳ್ಕೊಳ್ಳಬಾ ಅಂತ ಏನೂ ಇರ ತಿಳ್ಕೊಂಡೆ....

ಶಿಷ್ಯ1 : ನಾನಾಗಿ ಬಂದಿದೀನಿ....ನನ್ನ ಆತ್ಮ ಸಾಕ್ಷಿಯಾಗಿ ಬಂದಿದೀನಿ....ನನ್ನದು ತಪ್ಪು ಅಂತ ಅರಿವಾದ ಮೇಲೆ

ಬಂದಿದೇನಿ ...ಇಂಥವನ ಚೇಲಾ ಆಗಿ ಬದುಕೋಕಿಂತ ಭಿಕ್ಷೆ ಬೇಡಿ ಬದುಕೋದು ಹೆಚ್ಚು ಮರ್ಯಾದೆ.

ಮೇಸ್ಟ್ರು : ಇಷ್ಟು ದಿವಸ ಮೇಲಾದ್ರೂ ಅಷ್ಟು ಅರ್ಥ ಆಯ್ತಲ್ಲ.. ನಂಗೊತ್ತಿತ್ತು ಒಂದಲ್ಲ ಒಂದುದಿನ ನೀನು ಬದಲಾಗ್ತೀ ಅಂತ........ಆದ್ರೆ ಆ ಕೆಲಸ ಇಷ್ಟುಬೇಗ ಆದೀತು ಅನ್ಕೊಂಡಿರಲಿಲ್ಲ....ಒಳ್ಳೇದಾಯ್ತು....ಈಗ ಹೇಳು ನಿನಗೆ ಈ ಪರಮೇಶ್ವರಪ್ಪನ ಒಳಗೂಗೊತ್ತು ಹೊರಗೂ ಗೊತ್ತು ; ರಾಮನ ಲೆಕ್ಕಾಗೊತ್ತು, ಕೃಷ್ಣನಲೆಕ್ಕ ಗೊತ್ತು; ಈಗಹೇಳು–ಗಟ್ಟಿಯಾಗಿ ಹೇಳು–ಜಗತ್ತಿಗೆ ಸಾರಿಸಾರಿ ಹೇಳು ; ಯಾವುದುಸತ್ಯ, ಯಾವುದು ಅಸತ್ಯ, ಯಾವುದು ಹಾಲು, ಯಾವುದು ನೀರು.

ಶಿಷ್ಯ 1 : ಖಂಡಿತಾ ಹೇಳ್ತೀನಿ.

ಮೇಸ್ಟ್ರು : ದೇವರ ಹೆಸರಿನಲ್ಲಿ ಶೋಷಣೆ ಮಾಡ್ತಾ, ತನ್ನ ಹೆಸರನ್ನ ತಲತಲಾಂತರಕ್ಕೂ ಉಳಿಸೋ ಪ್ರಯತ್ನ ಮಾಡೋ ಇಂಥ ಖದೀಮನಿಗೆ ಜಯಕಾರ ಹೇಳೋಣೋ–ಧಿಕ್ಕಾರ ಹೇಳೋಣೋ....

ಶಿಷ್ಯ 1 : ....ಛೀ!!!.... ಇಂಥ ನಯವಂಚಕರಿಗೆ, ಹಗಲು ದರೋಡೆಕಾರನಿಗೆ ನಾವೆಲ್ಲ ಹೇಳಬೇಕಾದ್ದು–ಧಿಕ್ಕಾರ ಮಾತ್ರ.

ಮೇಸ್ಟ್ರು : ಪರಮೇಶ್ವರಪ್ಪನಿಗೆ

ಶಿಷ್ಯ 1 : ಧಿಕ್ಕಾರ

ಮೇಸ್ಟ್ರು : ಪರಮೇಶ್ವರಪ್ಪನಿಗೆ

ಶಿಷ್ಯ 1 : ಧಿಕ್ಕಾರ

(ಹೀಗೆ ನಾಲ್ಕುಬಾರಿ 'ಧಿಕ್ಕಾರ'ದ ಕೂಗಿರುವಾಗ, ಇನ್ನೊಬ್ಬ ಶಿಷ್ಯನೂ ಇತ್ತತಿರುಗುವ Freeze. ಧಿಕ್ಕಾರದಲ್ಲಿ ಪ್ರೇಕ್ಷಕರೂ ಪಾಲುಗೊಳ್ಳುವಂತೆ ನಿರ್ದೇಶಕರು ಪ್ರಯತ್ನಿಸಬೇಕು)



ಬಂದರೋ ಬಂದರು ಬೀದಿನಾಟಕದ ಒಂದು ದೃಶ್ಯ



ಚಿತ್ರಾ

ಬೀದಿ ನಾಟಕಗಳ ಬಗ್ಗೆ
ಹೆಚ್ಚಿನ ವಿವರ
[illegible]
ಇಂದೇ ಬರೆಯಿರಿ :

ಉಡುಪಿಯ ಸಂತೆಪೇಟೆಯಲ್ಲಿ 'ಬಂದರೋ ಬಂದರು'

ಎ. ಎಸ್. ಮೂರ್ತಿ ಸಂಚಾಲಕರು ಚಿತ್ರಾ ಕಲಾಮಂದಿರ ೧ನೇ ಕ್ರಾಸ್ ಹನುಮಂತನಗರ ಬೆಂಗಳೂರು–19

ಬಂದರೋ ಬಂದರು — ಬೀದಿನಾಟಕ

ಅಭಿಪ್ರಾಯಗಳು

"ಚಿತ್ರಾ" ಬಳಗದವರು ಅಭಿನಯಿಸಿದ ಶ್ರೀಪತಿ ವಿಜಯಾ ಅವರ "ಬಂದರೋ ಬಂದರು" ನೋಡಿದೆ—ಸಂತೋಷಪಟ್ಟೆ.... ಬೀದಿನಾಟಕಗಳ ಬಗ್ಗೆ ನಾನು ಕೇಳಿದ್ದೆ—ಆದರೆ ನೋಡಿರಲಿಲ್ಲ. ಇಷ್ಟು ಜನರು ನೋಡುವುದನ್ನೂ ನೋಡಿರಲಿಲ್ಲ.... ಇದು ಬರೇ ಉದ್ಬೋಧಕವಾದದ್ದು—ತುಂಬಾ ಪ್ರಭಾವಿಯಾದದ್ದು—ಇದರಿಂದ ಬಂದಂಥ ಉತ್ಸಾಹವನ್ನು ನಾವು ಸ್ವೀಕರಿಸಬೇಕು. ಆಗ ನಮ್ಮ ನಾಗರೀಕಜೀವನದಲ್ಲಿ ಹೆಚ್ಚಿನ ಸಂಸ್ಕೃತಿ, ಹೆಚ್ಚಿನ ಬುದ್ಧಿವಂತಿಕೆ ಬರುವುದರಲ್ಲಿ ಯಾವ ಸಂಶಯವೂ ಇಲ್ಲ.... "ಬಂದರೋ ಬಂದರು"ಇಂಥ ಒಂದು ಉಜ್ವಲವಾದ ನಾಟಕವನ್ನು ಮತ್ತು ಅದಕ್ಕೆ ಯೋಗ್ಯವಾದಂಥ ಹಿನ್ನೆಲೆಯುಕ್ತ, ಅದಕ್ಕೆ ಬೇಕಾದಂಥ ಸ್ವಲ್ಪದರಲ್ಲೇ ಕುಣಿತ, ಸ್ವಲ್ಪದರಲ್ಲೇ ವಾದ್ಯ, ಸ್ವಲ್ಪದರಲ್ಲೇ ವೇಷ, ಸೋಗು—ನಗೆ—ಆಟ ಇವನ್ನೆಲ್ಲ ಸೇರಿಸಿಕೊಂಡು ಒಂದು ಉತ್ತಮವಾದ ಸಂಕೀರ್ಣ ಪ್ರಯೋಗವನ್ನು ಚಿತ್ರಾದವರು ತಯಾರಿಸಿದ್ದಾರೆ. ನಿರ್ದೇಶಿಸಿದ ಎ. ಎಸ್. ಮೂರ್ತಿಯವರನ್ನು ಮತ್ತು ಲೇಖಕಿಯರಾದ ಶ್ರೀಪತಿ ವಿಜಯಾ ಅವರನ್ನು ನಾನು ಹೃತ್ಪೂರ್ವಕವಾಗಿ ಅಭಿನಂದಿಸ್ತೇನೆ.

['ಬಂದರೋ ಬಂದರು ಶತದಿನೋತ್ಸವದಂದು']

— ಪ್ರೊ॥ ವಿ. ಕೃ. ಗೋಕಾಕ್

ಬೀದಿಯಲ್ಲಿ ಬಂದಾಯ್ತು...ಬಡವರನ್ನು ದೇವರ ಹೆಸರಿನಲ್ಲಿ ಶೋಷಿಸುವ ಸಮಯಸಾಧಕ ರಾಜಕಾರಣಿಗಳ ಬಂಡವಾಳವನ್ನು ಬಯಲಿಗೆಳೆಯುವ 'ಬಂದರೋ ಬಂದರು' ಬೀದಿನಾಟಕ ಸದ್ಯದ ಪರಿಸ್ಥಿತಿಯ ಒಂದು ಚಿತ್ರ.. ಇಂದಿನ ಬಹುಪಾಲು ಜನರಲ್ಲಿ ಭದ್ರವಾಗಿ ತಳ ಊರಿದ ಮೌಢ್ಯಗಳನ್ನೇ ತಮ್ಮ ಶ್ರೇಯಸ್ಸಿನ ಭದ್ರತೆಗೆ ಉಪಯೋಗಿಸಿಕೊಂಡು ಆ ಮೂಲಕ ಶೋಷಣೆಯ ಶಕ್ತಿ ಪಡೆಯುವ ರಾಜಕಾರಣಿಗಳು ಈ ನಾಟಕದಲ್ಲಿ ಬಹಿರಂಗಕ್ಕೆ ಬರುತ್ತಾರೆ. ಇದು ನಮ್ಮ ಊರಿನಲ್ಲಿ, ನಮ್ಮ ಓಣಿಯಲ್ಲಿ, ನಮ್ಮ ಮನೆಯ ಎದುರೇ ನಡೆಯಬಹುದಾದ, ನಡೆದಿರಬಹುದಾದ ಕಥೆ. ಇದಕ್ಕೆ ಮೂಕ ಪ್ರೇಕ್ಷಕರಾಗಿ ನಾವು ನೀವು ಕಣ್ ಸಾಕ್ಷಿಗಳಾಗಬಹುದು. ದೇವಸ್ಥಾನ ಕಟ್ಟಿಸುವ ನೆಪದಿಂದ ಒಬ್ಬ ರಾಜಕಾರಣಿ ಹಾಕುವ ವೇಷ, ಹೂಡುವ ಆಟ. ಸಂಗ್ರಹಿಸುವ ಹಣ ಇದಕ್ಕೆ ಲೆಕ್ಕವೇ ಇಲ್ಲ. ಇಂಥದನ್ನು ನಾವೇಕೆ ಪ್ರಶ್ನಿಸಬಾರದು ? ನಾಟಕದ ಕೊನೆಯಲ್ಲಿ ಬರುವ ಪಾತ್ರಧಾರಿಯು ಈ ಪ್ರಶ್ನೆ ಜನರಲ್ಲೂ ಪ್ರತಿಧ್ವನಿಸಿ ಚಿಂತನೆಗೆ ಹಚ್ಚುತ್ತದೆ.

– **ಚಿತ್ರದೀಪ**
3–1–80

ಚಿತ್ರಾ ಬೀದಿನಾಟಕ ತಂಡದವರು ಅಭಿನಯಿಸಿದ ಶ್ರೀಮತಿ ವಿಜಯಾ ಅವರು ಬರೆದ 'ಬಂದರೋ ಬಂದರು' ನೋಡಿದೆ....ನಾಟಕದಲ್ಲಿ ಹೇಳಿದ ಹಾಗೆ ನಾಲ್ಕು ದೇವಸ್ಥಾನ ಇದ್ರೆ ಇನ್ನೂ ಒಂದು ದೇವಸ್ಥಾನ ಕಟ್ಟಿಸೋ ಪ್ರಯತ್ನಾನೇ ಮಾಡ್ತಾರೆ. ಅದರಲ್ಲೂ ನಮ್ಮ ರಾಜಕೀಯ ಮತ್ತು ಸಾಮಾಜಿಕ leaders ಗಂತೂ ದೇವಸ್ಥಾನಗಳನ್ನು ಕಟ್ಟಿಸುವ ಹುಚ್ಚು....ಇಂಥ ವಿಚಾರಗಳನ್ನ ಬೀದಿ ನಾಟಕದಲ್ಲಿ ಹೇಳ್ತಾ ಹೋಗಬಹುದು. ....ಇಂಥೋವು ಕಿವೀಮೇಲೆ ಬೀಳ್ತಾ ಇದ್ದರೆ ಸಾಮಾನ್ಯ ಜನ ಸ್ವಲ್ಪ ಎಚ್ಚೆತ್ಕೋತಾರೆ.

– **ಕುವೆಂಪು**

'ಬಂದರೋ ಬಂದರು' ಬೀದಿನಾಟಕ ನಾನು ತುಂಬ ಮೆಚ್ಕೊಂಡಿದೀನಿ.... ನಮಗೆಲ್ಲ ಕೆಚ್ಚನ್ನು ಕೊಡುವ ಇಂಥ ನಾಟಕ ನೂರಲ್ಲ ಸಾವಿರಾರು ಪ್ರದರ್ಶನವಾಗಲಿ. ಈ ನಾಟಕದ ಕೊನೆಯಲ್ಲಿ ಬರುವಂತೆ ನಾವೆಲ್ಲ ಧಿಕ್ಕಾರ ಕೂಗತಕ್ಕಂಥಾ ಶಕ್ತಿಯನ್ನು ಬೆಳೆಸಿಕೊಳ್ಳೋಣ-

[ಬೀದಿನಾಟಕೋತ್ಸವದ ಉದ್ಘಾಟನೆಯಂದು] — ಖಾದ್ರಿ ಶಾಮಣ್ಣ

ಸಂಪಾದಕರು-ಕನ್ನಡಪ್ರಭ

ಚಿತ್ರಾದವರ 'ಬಂದರೋ ಬಂದರು' ಬೀದಿನಾಟಕ ಕುವೆಂಪು ಅವರ ಮನೆಯ ಬಳಿ ನೋಡಿದಾಗ ನನಗೆ ಒಂದು ಹೊಸ ಅನುಭವವೇ ಆಯಿತು.... ಇಲ್ಲಿ ಆಗುವ ಅನುಭವ ಯಾರಿಗೂ ಅರ್ಥ ಆಗೋದಿಲ್ಲ ಅನ್ನೋ ಪ್ರಶ್ನೆ ಬರೋದೇ ಇಲ್ಲ. ಎಲ್ಲ ಸಾಮಾನ್ಯ ಜನರಿಗೂ ಏನು ಹೇಳಬೇಕು ಅನ್ನೋದನ್ನ ಪರಿಣಾಮಕಾರಿಯಾಗಿಯೂ ಹೇಳಿದ್ದಾರೆ ಅಂತ ನನಗೆ ಅನಿಸ್ತು. ಇಂಥದನ್ನು ಸ್ವಾಗತಿಸಲು ನಾವು ಕೇಳಬೇಕಾಗಿಲ್ಲ ಅವರೇ ಸ್ವಾಗತಿಸುತ್ತಾರೆ ಅನ್ನೋದಕ್ಕೆ ಕುವೆಂಪು ಅವರ ಮನೆಯ ಮುಂದೆ ಸೇರಿದ ಜನಸಮೂಹವೇ ಸಾಕ್ಷಿಯಾಗಿತ್ತು.

— ಜಿ. ಎಚ್. ನಾಯಕ್

ಬೆಂಗಳೂರಿನ "ಚಿತ್ರಾ" ಉಡುಪಿಯಲ್ಲಿ 'ಬಂದರೋ ಬಂದರು' ಬೀದಿನಾಟಕ ಅಭಿನಯಿಸಿದರು. ಬುಧವಾರದ ಸಂತೆಯ ದಿನದ ಜನಜಂಗುಳಿಯ ಬೀದಿ ಈ ತಂಡಕ್ಕೆ ರಂಗಮಂಟಪವಾಯಿತು. ದೇವರ ಹೆಸರಿನಲ್ಲಿ ಹಣ ಮಾಡುವ ತಕ್ಕು ಸಮಾಜ ಸೇವಕರ ಪೊಳ್ಳುತನವನ್ನು ಬೀದಿಯಲ್ಲಿ ನಾಟಕದ ಮೂಲಕ ಬಯಲು ಮಾಡಿದರು ಈ ಕಲಾವಿದರು.

— ಜೀಬಿ

ಉದಯವಾಣಿ

'ಬಂದರೋ ಬಂದರು' ಬೀದಿನಾಟಕ ಕಂಡದ್ದು ಉಡುಪಿಯಲ್ಲಿ... ಇಂಥ ಬೀದಿನಾಟಕಗಳು ಮೂಕರಿಗೊಂದು ಬಾಯಿ ಆಗಬಲ್ಲವು. ಅಷ್ಟೇ ಅಲ್ಲ, ಜನ ಸಾಮಾನ್ಯರ ಮಾನಸಿಕ ಆರೋಗ್ಯವನ್ನು ಉಳಿಸಿಕೊಳ್ಳುವುದರೊಂದಿಗೆ ಅವರು ಬದುಕುತ್ತಿರುವ ಪರಿಸರದ ಬಗ್ಗೆ ಹೊಸ ಎಚ್ಚರವನ್ನು ಉಂಟು ಮಾಡಬಲ್ಲದು.

– ರಾಮದಾಸ್

ಅಧ್ಯಾಪಕರು, ಪೂರ್ಣಪ್ರಜ್ಞ ಕಾಲೇಜ್–ಉಡುಪಿ

ಹಾಸನದ ಬಸ್‌ಸ್ಟ್ಯಾಂಡಿನಲ್ಲಿ 'ಬಂದರೋ ಬಂದರು' ಬೀದಿನಾಟಕ ನೋಡಿದೆ. ಈ ಶತಮಾನದ ಸಮಾಜವಾದ್ಯಮುಕ್ತಿಯ ನೂತನ ಕೊಡುಗೆ [illegible] ಗೆಳೆಯರ ಬೀದಿನಾಟಕ.

–ಸಂಪಾದಕರು

ಜನಮಿತ್ರ-ಹಾಸನ

ಬಂದರೋ ಬಂದರು : ಜನರ ಸಾಮಾಜಿಕ ಪ್ರಜ್ಞೆ ಕೆರಳಿಸುವ–ಅವರ ಅರಿವಿನ ಮಟ್ಟ ಹೆಚ್ಚಿಸುವ ಹಾದಿಯಲ್ಲಿ ಇಂಥ ಬೀದಿನಾಟಕ ತುಂಬ ಮಹತ್ವದ್ದು.

–ಎಸ್. ಎಸ್. ರಾಮೇಗೌಡ

ಪ್ರಿನ್ಸಿಪಾಲ್ ರೂರಲ್‌ಕಾಲೇಜ್

.....ಪೇಟೆಗಳಲ್ಲಿ ಮೋಸ, ವಂಚನೆ, ಹಿಂಸೆಗಳಿಗೆ [illegible] ಶಕ್ತಿ ಹೀನರು, ಜನವಿರೋಧಿ ಸ್ವಾರ್ಥ [illegible] ಮಂತ್ರ [illegible] ಹೀನರು ದುರ್ಬಲ ವರ್ಗಗಳವರ [illegible]. [illegible] ಸ್ವಾರ್ಥಿಗಳಿಗೆ ನೆರವಾಗುತ್ತಾರೆ. [illegible] ಅವರ 'ಬಂದರೋ ಬಂದರು' ಬೀದಿನಾಟಕ ಈ [illegible] ಉದಾಹರಣೆಯಾಗಿದೆ.

– ದಿವಾಕರ

[illegible]

1974 ರಲ್ಲೇ ಬೀದಿಗೆ ಬಂದು ಈ ಹೊತ್ತಿಗೆ 'ಚಿತ್ರಾ' ದವರಿಂದ ನೂರಾರು ಬಾರಿ ಪ್ರದರ್ಶನಗೊಂಡು ಎಲ್ಲೆಡೆಯಿಂದ ಹೆಚ್ಚು ಬೇಡಿಕೆಗೆ ಪಾತ್ರವಾಗಿರುವ ನಾಟಕ 'ಬಂದರೋ ಬಂದರು'.

ಹಾಸ್ಯ, ಗೇಲಿ, ವಿಡಂಬನೆ, ಹಾಡು, ಕುಣಿತಗಳನ್ನು ತುಂಬ ಅರ್ಥಪೂರ್ಣವಾಗಿ ಬಳಸಿ ಪರಮೇಶ್ವರಪ್ಪನಂಥ ಪುಡಾರಿಗಳ ಮುಖವಾಡದ ಬದುಕನ್ನು, ಅಂಥವರ ಸುತ್ತ ಅಡ್ಡಾಡುವ ಸ್ವಾರ್ಥ ಸಾಧಕರ ಹಿಂಡನ್ನ ಬೀದಿಯಲ್ಲೇ ಬಯಲಿಗೆಳೆಯುವ ಈ ನಾಟಕ ಮುಕ್ತಾಯದ ಹೊತ್ತಿಗೆ ಪ್ರೇಕ್ಷಕರನ್ನು ಆಲೋಚನಾಮಗ್ನರನ್ನಾಗಿ ಮಾಡುತ್ತದೆ.

'ಬಂದರೋ ಬಂದರು' ಬೀದಿನಾಟಕ ಬರೆದ ಶ್ರೀಮತಿ ವಿಜಯಾ ಬೀದಿಗೆಂದೇ ಬರೆದ 'ಕೇಳ್ರಪ್ಪೋ ಕೇಳ್ರಿ', 'ಕಸಿದವರು', 'ಮುಖವಿಲ್ಲದವರು' ಸಹಾ ಈಗಾಗಲೇ ನಾಡಿನಾದ್ಯಂತ ಪ್ರದರ್ಶಿಸಲ್ಪಟ್ಟು ಹೆಸರಾಗಿವೆ. ಕುವೆಂಪು ಅವರ ಕತೆ ಆಧಾರಿತ 'ಧನ್ವಂತರಿಯ ಚಿಕಿತ್ಸೆ' ನಾಟಕ, ಗಿರೀಶ್‌ಕಾರ್ನಾಡರ 'ಮಾನಿಷಾದ'ದ ರೂಪಾಂತರ ಮತ್ತು 'ಉಳ್ಳವರ ನೆರಳು' ನಾಟಕಗಳು ಎರಡನೆ ಮುದ್ರಣವಾಗಿ ಬರಬೇಕಾಗಿದೆ.

—ಪ್ರಕಾಶಕರು

ಅಚ್ಚಿನಲ್ಲಿದೆ : ಶ್ರೀಮತಿ ವಿಜಯಾ ಅವರ 'ನಾತಿ… ೃ'

BLOSSOM
Ph. : 25320400
₹ 30